ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೩, ಸಂಚಿಕೆ ೨, ಜುಲೈ ೨೦೧೫

ಅರಿವಿನ ಚಿಗುರು ಅಧಿಕವಾಗಲಿ

Find us on: facebook®

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಸಿಡ್ನಿಯ ನೆನಪುಗಳು ... ಪು. ೨

ಚಿಲುಮೆಯ ಒಳಗೆ

ವಿಚಾರ ವಿಹಾರ ... ಪು. ೩

ರಾಂ ರಾಮ! ಹಾಸ್ಯ ... ಪು. ೪

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ಕೊಡ್ತೀರಾ! ... ಪು. ೬

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೮

ಚಿಲುಮೆಯ ಒಳಗೆ

ಪದ ಪುಂಜ/ರಂಗೋಲಿ ... ಪು. ೯

ಕರ್ನಾಟಕದ ರಾಜವಂಶಗಳು ... ಪು. ೧೦

ಚಿಲುಮೆಯ ಒಳಗೆ

ಫಿಟ್ನೆಸ್ ಮಂತ್ರದ ಸುಂದರ ಬೆಡಗಿ... ಪು. ೧೪

ವಿಜ್ಞಾನ , ಅಲ್ಲಲ್ಲಿ ಏನೇನು ... ಪು. ೧೫

ಕನ್ನಡದ ಒಂದು ಕಾಯಕಕ್ಕೆ ಮನವಿ

ಪುಟ ೧೩

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ನಮ್ಮ ಮನಸ್ಸು ಸುಲಭವಾದ ಕೆಲಸಗಳನ್ನೇ ಮಾಡಲು ಇಷ್ಟಪಡುವುದು ಬಹುತೇಕ ಬಾರಿ ನಿಜ. ಶ್ರಮಪಟ್ಟು ಸಾಧಿಸಿರುವ ಅನೇಕ ಮಹನೀಯರಿದ್ದಾರೆ. ಅವರನ್ನು ನೆನೆಯುತ್ತೇವೆ. ಆದರೆ ಅವರ ಹಾದಿಯಲ್ಲಿ ನಡೆಯುವುದು ಕಷ್ಟವೆನಿಸಿದಾಗ ಮರೆಯುತ್ತೇವೆ ಕೂಡ.

ಅಂತೆಯೇ ಜ್ಞಾನವೂ ಸಹ. ಒಂದು ವಿಷಯದಲ್ಲಿ ಆಸಕ್ತಿ ಹುಟ್ಟಿ, ಅದನ್ನು ತಿಳಿಯುವ ತವಕವು ಸುಲಭವಾಗಿ ಬಹುತೇಕರಿಗೆ ಬಂದುಬಿಡುವುದು ಸಾಮಾನ್ಯ. ಆದರೆ, ಹಿಡಿದುಕೊಂಡ ಆ ವಿಷಯದಲ್ಲಿ ಪರಿಣಿತಿ ಸಾಧಿಸುವವರು ವಿರಳ. ಇದೇ ಆಯಾಮವನ್ನು ಇನ್ನೂ ವಿಸ್ತರಿಸಿ ಹೇಳಬೇಕೆಂದರೆ, ಜ್ಞಾನವನ್ನು ಒರೆಗೆ ಹಚ್ಚಿ ನೋಡದೆ ಒಂದು ನಾಮಾಂಕಿತದಲ್ಲಿ ಎಲ್ಲವನ್ನೂ ಒಪ್ಪಿ ಇಲ್ಲವೇ ಎಲ್ಲವನ್ನೂ ತ್ಯಜಿಸುವುದು ಅರಿಯುವ ಬಾಗಿಲನ್ನು ನಾವೇ ಮುಚ್ಚಿ ಕೊಂಡಂತೆ. ಶಂಕರ ಮೊಕಾಶಿಯವರ-ಅವಧೇಶ್ವರಿ ಎಂಬ ಕಾದಂಬರಿಯಲ್ಲಿನ ಈ ಮಾತುಗಳು ನೆನೆಯಲು ಯೋಗ್ಯ. "ನಮಗೆ ಯಾವುದೂ ಹೊಸತಲ್ಲ; ಹೊರತಲ್ಲ", "ನಿವೃತ್ತಿ ಮನುಷ್ಯನಿಗೆ ಇಲ್ಲವೇ ಇಲ್ಲ. ಮಾನವ ಬೇಡುವುದು ನಿರ್ವೃತಿಯನ್ನು, ನಿವೃತ್ತಿಯನ್ನಲ್ಲ", "ಸತ್ಯಗಳು ಗಹನವಾಗಿರುತ್ತವೆ. ಸಾಕ್ಷಿ ಆಯಾ ವ್ಯಕ್ತಿಗಳ ಅಂತರಾತ್ಮನೇ"

ನಮ್ಮಲ್ಲಿ ತಿಳಿದುಕೊಳ್ಳುವ ಕುತೂಹಲವು ಸಹಜವಾಗಿಯೇ ಹುಟ್ಟಿರುತ್ತದೆ. ಅದನ್ನು ಬೆಳೆಸಿ, ಪೋಷಿಸುವ ಕರ್ತವ್ಯವೂ ನಮ್ಮದೇ. ಸೀಮೆಯಿಲ್ಲದೆ, ಮುಕ್ತವಾಗಿ ಎಲ್ಲ ಕಡೆಯಿಂದಲೂ ವಿಚಾರವನ್ನು ಪಡೆದು, ಮಂಥನ ಮಾಡಿ, ನಂತರ ಸ್ವೀಕರಿಸುವುದೋ, ತ್ಯಜಿಸುವುದೋ ಎಂದು ನಿರ್ಧರಿಸಿದರೆ, ಅನೇಕಾನೇಕ ವಿಷಯಗಳ ಪರಿಚಯವಾಗುತ್ತದೆ. ನಮ್ಮ ಜ್ಞಾನ ಭಂಡಾರವೂ ವೃದ್ಧಿಸುತ್ತದೆ.

ಚೆಲುಮೆಯಲ್ಲಿ ಕಳೆದೆರಡು ವರ್ಷದಲ್ಲಿ ಪ್ರಕಟಗೊಂಡ ಲೇಖನಗಳ ಬಗೆಗಿನ ನಿಮ್ಮ ಅಭಿಪ್ರಾಯವನ್ನು ಓದುಗರಾದ ನೀವುಗಳು ಕೊಟ್ಟು, ನಮ್ಮ ನಿಮ್ಮ ವಿಶ್ವಾಸವು ಅಧಿಕವಾಗುವಂತೆ ಮಾಡಿದ್ದೀರಿ. ಬರುವ ದಿನಗಳಲ್ಲಿ ಕೂಡ ನಾನಾ ವಿಷಯಗಳ ಬಗ್ಗೆ ಲೇಖನಗಳು ಹೊರಬರಲಿವೆ. ನಿಮ್ಮ ಜ್ಞಾನದ ಬಾಯಾರಿಕೆಯನ್ನು ತಣಿಸುವ ಅಕ್ಷರ ಜಲವು ಹೊರನಾಡ ಚೆಲುಮೆಯಲ್ಲಿ ಅಧಿಕವಾಗಿ ಚಿಮ್ಮುತ್ತಿರಲಿ ಎಂಬುದೇ ನಮ್ಮ ಆಶಯ. ▪

ಎರಡು ತಿಂಗಳ ಪ್ರಮುಖ ದಿನಗಳು

ಜುಲೈ ಶ್ರೀ ಮನ್ಮಥ ನಾಮ ಸಂವತ್ಸರ, ಉತ್ತರಾಯಣ/ದಕ್ಷಿಣಾಯಣ, ಗ್ರೀಷ್ಮ ಋತು, ಆಷಾಢ/ನಿಜ ಆಷಾಢ ಮಾಸ

02 ಗು - ಹುಣ್ಣಿಮೆ
05 ಭಾ - ಸಂಕಷ್ಟ ಚತುರ್ಥಿ
14 ಮಂ - ಷಬ್ ಎ ಕ್ವಾದರ್
15 ಬು - ಅಮಾವಾಸ್ಯೆ
16 ಗು - ನಿಜ ಆಷಾಢ ಮಾಸ ಆರಂಭ
18 ಶ - ಕುತುಬ್ ಎ ರಂಜಾನ್
27 ಸೋ - ಏಕಾದಶಿ

ಆಗಸ್ಟ್ ಶ್ರೀ ಮನ್ಮಥ ನಾಮ ಸಂವತ್ಸರ, ದಕ್ಷಿಣಾಯಣ, ಗ್ರೀಷ್ಮ/ವರ್ಷ ಋತು, ನಿಜ ಆಷಾಢ/ಶ್ರಾವಣ ಮಾಸ

03 ಸೋ - ಸಂಕಷ್ಟ ಚತುರ್ಥಿ
10 ಸೋ - ಕಾಮಿಕಾ ಏಕಾದಶಿ
14 ಶು - ನಿಜ ಆಟಿ ಅಮಾವಾಸ್ಯೆ
15 ಶ - ಭಾರತದ ಸ್ವಾತಂತ್ರ್ಯ ದಿನ, ಶ್ರಾವಣ ಮಾಸ ಆರಂಭ
18, 25 ಮಂ - ಮಂಗಳ ಗೌರಿ ವ್ರತ
19 ಬು - ನಾಗರ ಪಂಚಮಿ
26 ಬು - ಪುತ್ರದಾ ಏಕಾದಶಿ
28 ಶು - ವರಮಹಾಲಕ್ಷ್ಮಿ ವ್ರತ
29 ಶ - ನೂಲ ಹುಣ್ಣಿಮೆ

ನಿರಾಸೆತಂದ 'ಸ್ಪೈಸೀಪಾವ್ ಬಾಜಿ'

ಸೀತ ಕೇಶವ

ಹ್ಯಾರಿಸ್ ಪಾರ್ಕ್ ಸಿಡ್ನಿಯಲ್ಲಿ ನೆಲೆಸಿರುವ ಭಾರತೀಯರಿಗೆ ಚಿರಪರಿಚಿತವಾದ ಬಡಾವಣೆ ಹಾಗೂ ನ್ಯೂ ಸೌತ್ ವೇಲ್ಸ್ ನ ಅತ್ಯುತ್ತಮ ಉಪನಗರ ಎಂದು ಆಸ್ಟ್ರೇಲಿಯಾದ ನಗರಾಭಿವೃದ್ಧಿ ಸಂಸ್ಥೆ ಎಂದು ಕರೆಯಲ್ಪಟ್ಟಿರುವ 'ಪ್ಯಾರಾಮಟ್ಟ್' ಸಬರ್ಬ್ ಗೆ ಅಂಟಿಕೊಂಡಿರುವಂತಿದೆ.

ನಾಲಿಗೆ ಚಪಲ ತೀರಿಸಲು ಹೀಗೆ ಒಂದು ಸಂಜೆ ಹ್ಯಾರಿಸ್ ಪಾರ್ಕ್ ನಲ್ಲಿ ಹಿಂದೆ ಇದ್ದದ್ದನ್ನೇ ಇನ್ನೂ ವಿಸ್ತಾರವಾಗಿರುವ ಜಾಗಕ್ಕೆ ವರ್ಗಾಯಿಸಿರುವ ಚಾಟ್ ಖಾಫ್ ಗೆ ರಾತ್ರಿ ಊಟಕ್ಕೆ ಹೋದೆವು. ಗೊತ್ತೇ ಇದೆಯಲ್ಲಾ ಹ್ಯಾರಿಸ್ ಪಾರ್ಕ್ ವಿಗ್ರಮ್ ಸ್ಟ್ರೀಟ್ ಎಂದರೆ ಎರಡು ಭಾಗಗಳಲ್ಲೂ ನಾನಾತರಹದ ರೆಸ್ಟೋರೆಂಟುಗಳು,ಅದರಲ್ಲೂ ಇಂಡಿಯಾದ ಹೋಟೆಲುಗಳು ಬಹಳಷ್ಟಿದೆ. ಇವೆಲ್ಲಾ ಸಾಮಾನ್ಯವಾಗಿ ಉತ್ತರ ಭಾರತೀಯ ಹೋಟೆಲುಗಳಾದರೂ, ಕೆಲವಲ್ಲಿ ದಕ್ಷಿಣ ಭಾರತೀಯ ಊಟವೂ ಸಿಗುವುದು. ದಿನಸಿ ಅಂಗಡಿಗಳಿಗೂ ಹೆಸರುವಾಸಿಯಾಗಿರುವುದು ಹೇಳಬೇಕಾಗೇ ಇಲ್ಲ. ಹೀಗಾಗಿ ಹೋಟೆಲ್ಗೆ ಎರಡೆರಡು ಬಾರಿ ರಸ್ತೆಯಲ್ಲಿ ಸುತ್ತಾಡಿದ ಮೇಲೆ ಕಾರು ನಿಲ್ಲಿಸಲು ಜಾಗ ಸಿಕ್ಕಿತು. ಯಾರಾದರೂ ವಿಗ್ರಂ ಸ್ಟ್ರೀಟಿಗೆಹೋಗಿದ್ದರೆ ತಿಳಿಯುತ್ತದೆ ಕಾರ್ ಪಾರ್ಕ್ ಸಿಕ್ಕುವುದು ಎಷ್ಟು ಸುಲಭ ಅಂತ!! ಏನಪ್ಪಾ ಅಂದರೆ ಚಾಟ್ ಕಾಫ್ ವಿಗ್ರಮ್ ರಸ್ತೆಯಲ್ಲಿರದೆ ಅದರ ಹಿಂಬಾಗದ ರಸ್ತೆಯಲ್ಲಿದೆ ಅಷ್ಟೆ!! ಹೋಟೆಲಿನ ಮುಂಭಾಗದಲ್ಲೂ ಕಾರು ನಿಲ್ಲಿಸಲು ಸ್ಥಳ ಇದೆ ಆದರೆ ನಮಗೆ ಸಿಕ್ಕಲಿಲ್ಲ. ಹೋಟೆಲಿನ ಮುಂದೆ ಎಲ್ಲಾ ಜನವೋ ಜನ, ಕ್ಯೂ, ಗಿಜಿ ಗಿಜಿ ಮಾತು, ಮಕ್ಕಳ ಅಳು, ನಗು, ಹೆಸರು ನೋಂದಾಯಿಸಿ ಅವರ ಸರದಿಗೆ ಕಾದುಕೂತಿರುವವರು ಎಷ್ಟೋ ಮಂದಿ! ವಾತಾವರಣವಂತೂ ಹಬ್ಬದ ಸಂಭ್ರಮ ಮೂಡಿಸಿತ್ತು. ನಾವು ಹೋಗಿ ನಮ್ಮ ಹೆಸರು ನೊಂದಾಯಿಸಿದಾಗ ಸುಮಾರು ಹದಿನೈದು ನಿಮಿಷ ವೆಂದರು. ಆದರೆ ಸಾಕಷ್ಟು ಬೇಗಲೇ ಕರೆದರೆನ್ನಿಸಿತು.

ವೆಬ್ ಸೈಟ್ನಲ್ಲಿ 'ಸ್ಪೈಸೀ ಪಾವ್ ಬಾಜಿ' ಚಿತ್ರ ತುಂಬಾ ಆಕರ್ಷಿಸಿ ಮೊದಲೇ ನೋಡಿಕೊಂಡಿದ್ದರಿಂದ, ಮೆನ್ಯು ಕಾರ್ಡ್ ಕೊಟ್ಟಾಗ ನೋಡಿ ಕುಷಿಯಾಗಿ ಅದನ್ನೇ ಹೇಳಿದ್ದಾಯಿತು. ತಂದಿಟ್ಟಾಗ ನೋಡಿದರೆ ಬರೀ ಗ್ರೇವಿಯಲ್ಲಿ (ಹುಳಿ) ಮೂರು ನಾಲ್ಕು ಬ್ರೆಡ್ ತುಂಡುಗಳಿದ್ದು ತುಂಬಾ ನಿರಾಸೆಯಾಯಿತು ಹಾಗೂ ಮಸಾಲೆ ದೋಸೆನೂ ಹೇಳಿತ್ತು. ಅದೂ ಸುಮಾರಾಗಿ ಇದ್ದು, ಕಾರಿಗೆ ಬಂದು ಕೂತಕೂಡಲೇ, ಹೊಟ್ಟೆನೂ ತುಂಬದಿದ್ದರಿಂದ ನನಗೆ ನಾನೇ ಸ್ಪೈಸೀ ಪಾವ್ ಬಾಜಿ ನೆನಸಿಕೊಂಡು ಹೊಟ್ಟೆ ಹುಣ್ಣಾಗುವಹಾಗೆ ನಕ್ಕು ಇನ್ನೆಂದೂ ಚಿತ್ರ ನೋಡಿ ತೀರ್ಮಾನ ಮಾಡಬಾರದೆನ್ನುವ ಪಾಠ ಪಾವ್ ಬಾಜಿ ಕಲಿಸಿ, ಚಿತ್ರದ ಆಕರ್ಷಣೆಯೇ ರೆಸ್ಟೋರೆಂಟಿನಲ್ಲಿ ಕೂತು ತಿಂದಿದ್ದಿಕ್ಕಿಂತ ಹೆಚ್ಚಿನ ತೃಪ್ತಿಕೊಟ್ಟಿತು! ▪

ಸಿಡ್ನಿಯಂದರೆ.....

ಮಹಾಂತೇಶ್. ಸಿ

ಸಿಡ್ನಿಯಂದರೆ ಆಸ್ಟ್ರೇಲಿಯಾದ ಅನಧಿಕೃತ ರಾಜಧಾನಿ, ಭಾರೀ ದುಬಾರಿ ನಗರ, ಒಪೆರಾ ಹೌಸನ ತುಂಬಿದ ಪ್ರದರ್ಶನಗಳ ನಗರ. ಸಿಡ್ನಿಯಂದರೆ ವಾರಾಂತ್ಯದಲ್ಲಿ ರಂಗೇಳುವ ಡಾರ್ಲಿಂಗ್ ಹಾರ್ಬರಿನ ಪಾರ್ಟಿಗಳು, ಬೇಸಿಗೆಯಲ್ಲಿ ದೀರ್ಘ ಹಗಲುಗಳು, ಜೂನ ನಂತರ ಮೈ ಕೊರೆಯುವ ಚಳಿ, ಅತ್ಯುತ್ತಮ ರೈಲು ನೆಟ್ವರ್ಕ್, ಜಾರ್ಜ ಸ್ಟ್ರೀಟ್, ಮಾರ್ಕೇಟ ಸ್ಟ್ರೀಟ್, ಪೀಟ ಸ್ಟ್ರೀಟ್, ಟೌನ್ ಹಾಲ, ಸೆಂಟ್ರಲ್, ವಿನಯಾರ್ಡದ ಜನಸಾಗರ, ಬೆಂಗಳೂರಿನ ಕೆ.ಆರ್ ಮಾರುಕಟ್ಟೆಯ ಹಾಗೆ ಕಾಣುವ ಫ್ಲೇಮಿಂಗ-ಟನ್ ತುಂಬಿದ ಸಂತೆ, ಸಿಡ್ನಿಯಂದರೆ ಹ್ಯಾರಿಸ ಪಾರ್ಕ, ಪ್ಯಾರಾಮಟ್ಟದ ಭಾರತೀಯರು, ಅಂಗಡಿಗಳು ಮತ್ತು ಹೋಟಲಗಳು, ರೌಂಡ್ ಅಬೋಟ, ಸ್ಟಾಪ್, ಗಿವ್ ವೇ, ಮೊಟರವೇಗಳು, ವಿಪರೀತ ಕಾಯ್ದೆಗಳು ಹಾಗೂ ದುಬಾರಿ ದಂಡಗಳು ಖಚಿತ.

ಸಿಡ್ನಿಯಂದರೆ ಲಿವರಪೂಲ ಮತ್ತು ಪ್ಯಾರಮಟ್ಟದ ಕನ್ನಡ ಶಾಲೆಗಳು, ಕನ್ನಡದ ಸೇವೆಗಾಗಿ ಟೊಂಕ ಕಟ್ಟಿ ನಿಂತ ಕನಕಾಪೂರ ನಾರಾಯಣ (ನಾವು ಕರೆಯೋದು ಹೆಡ್ ಮೇಷ್ಟ್ರು ಅಂತ) ಮತ್ತು ಅವರ ಕುಟಂಬ, ಕನ್ನಡ ಶಾಲೆಯ ಕಿತಾಪತಿ ಮಾಡುವ ಅಮೋಘ, ದೈವ ಮತ್ತು ಇನ್ನಿತರ ವಿದ್ಯಾರ್ಥಿಗಳು.ಸಿಡ್ನಿಯಂದರೆ ಶನಿವಾರದ ೨ ಘಂಟೆಯಿಂದ ೩ ಘಂಟೆಗೆ ರಾಜ ನಟರಾಜನ್ ಮತ್ತು ಸಿಡ್ನಿ ಶ್ರೀನಿವಾಸನರು ನಡೆಸಿಕೊಡುವ ಕನ್ನಡ ಬಾನುಲಿ ಕಾರ್ಯಕ್ರಮ, ಮನೆ ಬಾಡಿಗೆಗಾಗಿ ತುಂಬಾ ಒದ್ದಾಡಬೇಕಾದ ಜಾಗ, ಅಪರಿಮಿತ ಅವಕಾಶಗಳು ಕನ್ನಡಿಯ ಗಂಟು.

ಸಿಡ್ನಿಯಂದರೆ ಆಕ್ಸಿಡೆಂತಲ ಬಾರ್ ಮತ್ತು ಕೋಗರ ಹೊಟಲನಲ್ಲಿ ಪ್ರಸಾದ, ಹೇಮಂತ ಮತ್ತು ಬಸು ಜೊತೆಯ ಚರ್ಚೆಗಳು, ಪ್ರಸಾದನ ಜೊತೆ ವಾದಗಳು, ಪ್ರಸಾದ ಮಗನಾದ ಸಮರ್ಥ ಜೊತೆಯ ಆಟಗಳು, ಶೋಭಾ ಮತ್ತು ಶೋಭವರ ಸಹಾಯಗಳು. ಸಿಡ್ನಿಯಂದರೆ ಹೆಲನ್ಸಬರ್ಗನ ದೇವಸ್ಥಾನದ ದೋಸೆ ಮತ್ತು ಧಕ್ಷಿಣ ಭಾರತೀಯ ತಿನಿಸುಗಳು, ಪ್ಯಾರಮಟ್ಟದ ತಮಿಳಿಗರ ಪರಮಾದೈವ ಮುರಗನ್ ದೇವಸ್ಥಾನ, ಮಿಂಟೋದ ಶಿವಾಲಯ, ಸಿಡ್ನಿಯ ಸಾಯಿಬಾಬಾ, ಬ್ಲಾಕಟೌನನ ಗುರುದ್ವಾರದ ಲಂಗರು, ಸಿಡ್ನಿಯ ಬಸವ ಸಮಿತಿ ಬಸು ಮತ್ತು ಇನ್ನಿತರರು ಖಂಡಿತ ನನಗೆ ನೆನಪಿಗೆ ಬರುವರು. 'ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ' ಅಂದುಕೊಳ್ಳುತ್ತಾ 'ಬದಲಾವಣೆ ಜಗದ ನಿಯಮ' ಎಂದುಕೊಂಡು ಹೊಸ ನಿರೀಕ್ಷೆಯಲ್ಲಿ ವಿದಾಯ ಸಿಡ್ನಿಗೆ. ▪

(ಜಯಂತ ಕಾಯ್ಕಿಣಿ ಅವರ ಅಂಕೋಲೆ ಎಂದರೆ ಲೇಖನದಿಂದ ಪ್ರೇರಿತ)

ಪುರಂದರ ದಾಸರು

ಸಾವಿರಾರು ಹಾಡುಗಳನ್ನು ಮತ್ತು ಕೀರ್ತನೆಗಳನ್ನು ಬರೆದ ಕರ್ನಾಟಕ ಸಂಗೀತ ಪದ್ಧತಿಯ ಪಿತಾಮಹ ದಾಸವರೇಣ್ಯ ಶ್ರೀ ಪುರಂದರದಾಸರ ಹೆಸರನ್ನು ಕೇಳದ ಕನ್ನಡಿಗರು ಬಹಳ ವಿರಳ.

ಕಠಿಣ ಸಂಸ್ಕೃತ ಶ್ಲೋಕಗಳ ಮತ್ತು ವೇದ ಮಂತ್ರಗಳ ಗೋಜಿಲ್ಲದೆ ಸರಳವಾಗಿ ಕನ್ನಡ ಆಡುಮಾತಿನಲ್ಲಿ ಗೀತೆಗಳನ್ನು ರಚಿಸಿದವರು ಶ್ರೀ ಪುರಂದರ ದಾಸರು. ಅವರು ಬರೆದ ಕೃತಿಗಳಲ್ಲಿ ಜೀವನದ ಅನುಭವ ಸಾರ, ಆಧ್ಯಾತ್ಮ, ಆತ್ಮಾನುಭಾವ, ತತ್ವಜ್ಞಾನ ಇವುಗಳೆಲ್ಲವನ್ನು ಇಟ್ಟು ಹಾಡಿನ ರೂಪದಲ್ಲಿ ಸಾಮಾನ್ಯ ಜನಗಳನ್ನು ತಲುಪಿದ ಮಹಾನುಭಾವರು ಪುರಂದರ ದಾಸರು.

ಶ್ರೀಯುತ ಡಿ.ವಿ.ಜಿ. ರವರು ಹೇಳಿದಂತೆ 'ಭಜನೆ ಭಕ್ತಿಗೆ ಸುಲಭ'. ಭಕ್ತಿ ಆಧ್ಯಾತ್ಮ ಶಿಖರದ ಮೊದಲ ಮೆಟ್ಟಿಲು. ದೇವರನಾಮಗಳನ್ನು ಬರೆದು ಅವುಗಳನ್ನು ಭಜನೆಯ ರೂಪದಲ್ಲಿ ಭಜಿಸುವಂತೆ ಮಾಡಿ ಆಧ್ಯಾತ್ಮವನ್ನು ಜನಸಾಮಾನ್ಯರ ಮನಗಳಲ್ಲಿ ಬಿತ್ತಿದ ಹೆಗ್ಗಳಿಕೆ ಶ್ರೀ ಪುರಂದರ ದಾಸರದು. ಶ್ರೀ ಪುರಂದರರ ಮೇರು ಕೃತಿ 'ಭಾಗ್ಯದ ಲಕ್ಷ್ಮಿ ಬಾರಮ್ಮ' ಹಾಡದ ಸಂಗೀತಗಾರರಿಲ್ಲ.

ಶ್ರೀ ಪುರಂದರ ದಾಸರು ಹಲವು ಮುಂಡಿಗೆಗಳನ್ನು ಕೂಡ ರಚಿಸಿದ್ದಾರೆ. ಮುಂಡಿಗೆಗಳು ಎಂದರೆ ಗೂಢಾರ್ಥವಿರುವ ಕೃತಿಗಳು. ಈ ಮುಂಡಿಗೆಗಳು ಮೇಲ್ನೋಟಕ್ಕೆ ಸಾಮನ್ಯ ಅರ್ಥ ಬರುವಂತೆ ಕಂಡರೂ ಅವುಗಳೊಳಗೆ ಅಧ್ಯಾತ್ಮದ ಮತ್ತು ಜೀವನ ವಿಚಾರದ ಸಾರವಿದೆ.

ಶ್ರೀ ಪುರಂದರರ 'ಮಾಡು ಸಿಕ್ಕದಲ್ಲಾ ಮಾಡಿನ ಗೂಡು ಸಿಕ್ಕದಲ್ಲಾ' ಒಂದು ಮುಂಡಿಗೆಯ ರೀತಿಯ ಕೃತಿ. ಆ ಸಾಲಿನ ಮುಂದಿನದು 'ಜೋಡು ಹೆಂಡಿರಗಂಜಿ ಓಡಿ ಹೋಗುವಾಗ ಗೋಡೆ ಬಿದ್ದು ಬಯಲಾಯಿತಲ್ಲಾ'

ಮಾಡು ಎಂದರೆ ಮನೆ, ಗೂಡು ಎಂದರೆ ಆ ಮನೆಯಲ್ಲಿ ಇರುವ ಒಂದು ಕೊಠಡಿ. ನಾನು ನನ್ನದು ಎಂಬ ಈ ಪ್ರಪಂಚದ ಮಹಲಿನಲ್ಲಿ ನನ್ನದು ಎಂಬ ಗೂಡು ಇಟ್ಟುಕೊಂಡು ಇಲ್ಲೇ ಇರಲು ಆಗುವುದೇ ಇಲ್ಲ, ಕೊನೆಗೆ ಅದನ್ನು ಬಿಟ್ಟು ಹೋಗಲೇ ಬೇಕು. ಮನಸ್ಸು ಮತ್ತು ಬುದ್ಧಿ ಎಂಬ ಹೆಂಡತಿಯರಿಗೆ ಅಂಜಿ, ಇವೆರಡರ ಸಂಘರ್ಷಣೆಯಲ್ಲಿ ಆತ್ಮ ದೇಹ ತೊರೆದು 'ಗೋಡೆ ಬಿದ್ದು ಬಯಲಾಯಿತಲ್ಲಾ' ದೇಹ ಮಣ್ಣಿಗೆ ಬಿದ್ದು ಬಯಲಾಯಿತು.

ಈ ಮೇಲಿನ ಮುಂಡಿಗೆಯ ಮಿಕ್ಕ ಚರಣಗಳಲ್ಲಿ 'ಮುಪ್ಪು ಬಂದಿತಲ್ಲಾ ತಪ್ಪದೆ ಪಾಯಸ ಉಣಲಿಲ್ಲಾ'
'ತುಪ್ಪದ ಬಿಂದಿಗೆ ತಿಪ್ಪೆಯಮೇಲೆ ತೊಪ್ಪನೆ ಬಿತ್ತಲ್ಲ' ಅತ್ಯುತ್ತಮವಾದದ್ದು.

ಮನುಷ್ಯ ಜನ್ಮ ಶ್ರೇಷ್ಟವಾದದ್ದು. ತುಪ್ಪದ ಬಿಂದಿಗೆಗೆ ಹೇಗೆ ಬೆಲೆಯಿದೆಯೋ ಹಾಗೆಯೇ ಮನುಷ್ಯ ಜನ್ಮಕ್ಕೆ ಬೆಲೆ ಇದೆ. ಅಂತಹ ಜನುಮಕ್ಕೆ ಮುಪ್ಪು ಅಡರಿದರೂ 'ಆ ರಾಮನಾಮ ಪಾಯಸ' ತಪ್ಪದೆ ಉಣದೆ ಕೊನೆಗೆ ನೆಲಕ್ಕೆ ಬಿತ್ತಲ್ಲ ಎಂಬ ದುಃಖವನ್ನು ದಾಸರು ಹೊರಗೆಡಹಿದ್ದಾರೆ.

ಮತ್ತೊಂದು ಚರಣದ ಸಾಲು 'ಯೋಗವು ಬಂತಲ್ಲ ಬದುಕು ವಿಭಾಗವಾಯಿತಲ್ಲ'. ಮನುಷ್ಯನ ಜನ್ಮದ ಯೋಗ ನನಗೆ ಒದಗಿ ಬಂದಿದೆ. ನನ್ನ ಮನುಷ್ಯ ಜನ್ಮ ಸಂಸಾರಿಯಾಗಿ ನನ್ನ ಬದುಕು ಮಕ್ಕಳು, ಮೊಮ್ಮಕ್ಕಳು ಮತ್ತು ಮರಿ ಮಕ್ಕಳಾಗಿ 'ವಿಭಾಗ' ವಾಯಿತು ಮತ್ತು ಜೀವನವನ್ನು ಅನುಭವಿಸಿಯೂ ಆಯಿತು. ಆದರೂ 'ಭೋಗಿಶಯನ ಶ್ರೀ ಪುರಂದರ ವಿಠ್ಠಲನ ಆಗ ನೆನೆಯಲಿಲ್ಲ' ಎಂದು ದಾಸರು ಪೇಚಾಡಿಕೊಂಡಿದ್ದಾರೆ.

ಶ್ರೀ ವ್ಯಾಸರಾಯರು ತಿಳಿಸಿದಂತೆ 'ದಾಸರೆಂದರೆ ಪುರಂದರ ದಾಸರಯ್ಯ'. ಶ್ರೀ ಪುರಂದರರು ಮಹಾನುಭಾವರು, ಇದರಲ್ಲಿ ಸಂಶಯವಿಲ್ಲ. ಅವರ ಹಾಡುಗಳನ್ನು ಮನನ ಮಾಡಿ ಮತ್ತು ಭಜಿಸಿ ನಾವು ಕೂಡ ಆ ಅಗೋಚರ ಶಕ್ತಿಯಾದ ಭಗವಂತನಿಗೆ ದಾಸರಾಗುವ. ನಮ್ಮ ಅಂತ್ಯ ತಲುಪುವ ಒಳಗೆ ನಮ್ಮ ಅಹಂನ್ನು ಬಿಟ್ಟು ಸರ್ವಶಕ್ತನಿಗೆ ಶರಣಾಗಿ ವಿಶೇಷರಾಗುವ.

ಸರ್ವೇ ಜನಾಃ ಸುಖಿನೋ ಭವಂತು. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಯೋಗಾಯೋಗ

ಮೊನ್ನೆ ಬೆಂಗಳೂರಿನಲ್ಲಿ ಮಳೆ ಬಿತ್ತು.

ಒಂದು ತೊಗೊಂಡ್ರೆ ಇನ್ನೊಂದುಚಿತ!

ಆದ್ದರಿಂದ ಬೆಂಗಳೂರಿನಲ್ಲಿ ಮರ ಬಿತ್ತು!

ಭೀಮಸೇನ ದಾಪುಗಾಲಿಟ್ಟು ಹೋಗುವಾಗ ಹನುಮಂತನ ಬಾಲ ಅಡ್ಡಬಂದಂತೆ 40 ಅಡಿ ರಸ್ತೆಯಲ್ಲಿ 30 ಅಡಿ ಎತ್ತರದ, ಅಲ್ಲ, ಉದ್ದದ, ಅದೂ ಅಲ್ಲ, ಅಗಲದ...

ಹೌದು! ನಿಂತಿದ್ದಾಗ ಎತ್ತರ, ಮಲಗಿದ್ದಾಗ ಉದ್ದ ಸರಿ. ಆದರೆ ರಸ್ತೆಗೆ ಅಡ್ಡಲಾಗಿ ಬಿದ್ದಾಗ ಅದು ಉದ್ದವೋ, ಅಗಲವೋ?

ಯಾವುದೋ ಒಂದು. ಅಂತೂ 30 ಅಡಿಯ ಮರ ಬಿತ್ತು.

ವಿದ್ಯುತ್ ಅಗ್ನಿಸ್ವರೂಪ. ಮಳೆ ಜಲಸ್ವರೂಪ. ಜಲವಿರಲ್ ಅಗ್ನಿಯಿರ್ಕುಮೇ? ಮೊದಲ ಕೆಲವು ಹನಿಗಳ ಟಪಟಪಕ್ಕೆ ವಿದ್ಯುತ್ ಢಂ ಢಮಾರ್!

ಇನ್ನು ಹತ್ತಡಿ ಇದೆ ಎಂದಿರೇ? ಅದರಲ್ಲಿ ಐದು ಅಡಿ ಪಾಟ್ಹೋಲ್, ಐದು ಅಡಿ ಹೆನ್ಕ್ರೋಚ್ಮೆಂಟ್.

ಏನು? ಹೆನ್ಕ್ರೋಚ್ಮೆಂಟ್ ಅಲ್ಲ ಅಂದಿರೆ?

ಗಂಡು ಅಕ್ರಮವಾಗಿ ಜಾಗ ಹೊಂದಿದ್ದರೆ ಎನ್ಕ್ರೋಚ್ಮೆಂಟ್; ಹೆಣ್ಣು ಅಕ್ರಮವಾಗಿ ಜಾಗ ಹೊಂದಿದ್ದರೆ ಹೆನ್ಕ್ರೋಚ್ಮೆಂಟ್!

ಸೈಕಲ್ಲುಗಳು ಕಲ್ಲುಮಣ್ಣುಗಳಿದ್ದರೂ ಸೈ ಎಂದು ಅಲ್ಲಿಯೇ ನುಸುಳಿದವು.

ಸ್ಕೂಟರ್ನವನೊಬ್ಬ ಸೈಕಲ್ ಫಾಲೋ ಮಾಡಿದ.

ಪಾಟ್ಹೋಲ್ನ ಆಳ ಸ್ಕೂಟರ್ನ ಕಾರ್ಬೊರೇಟರ್ ಮಟ್ಟಕ್ಕಿಂತ ಹೆಚ್ಚಿತ್ತು.

ಸ್ಕೂಟರ್ ಸಂಪು ಹೂಡಿತು. ಹಿಂದಿದ್ದವರೆಲ್ಲ ಶುದ್ಧ ಪೊಲೀಸ್ ಸಂಸ್ಕೃತದಲ್ಲಿ ಸ್ಕೂಟರಿಗನ ಹೆಣ್ಣುಸಂಕುಲಕ್ಕೆ ಶಕ್ತ್ಯಾನುಸಾರ ಆಶೀರ್ವಾದ ಮಾಡಿದರು.

ಅಂತೂ ಬಂದ ದಾರಿಗೆ ಸುಂಕವೂ ಇಲ್ಲ, ಸುಖವೂ ಇಲ್ಲ.

ಹೆದ್ದಾರಿಯ ಪಕ್ಕದ ಮೆದ್ದಾರಿ(ಹಾಕಿದ್ದ ಟಾರಿನಲ್ಲಿ ಅರ್ಧ ಕಂಟ್ರಾಕ್ಟರ್, ಅರ್ಧ ಸರ್ಕಾರಿ ಇಂಜಿನಿಯರ್ ಮೆದ್ದ ದಾರಿ)ಗೆ ಅಂದಿನ ದಿನಭವಿಷ್ಯದಲ್ಲಿ ಸಿರಿವಂತರ ಕಾರುಗಳನ್ನು ಕಾಣುವ ಯೋಗ ಎಂದು ಬರೆದಿತ್ತಂತೆ.

ಯಮನ ಚರ್ಮದ ಅಂಧಕಾರಕ್ಕೆ ಊರ್ವಶಿಯ ಮೈಬಣ್ಣದ ಹೆಡ್ಲೈಟ್ಸ್ ಹೊಂದಿದ ವಾಹನಗಳು ತೆವಳುತ್ತಾ ಸಾಗಿದವು.

ಜೀವಮಾನದಲ್ಲೇ ಕ್ಯೂ ನಿಲ್ಲದ ಸಾಹು-ಕಾರ್ ಸಹ ಇಲ್ಲಿ ಸರತಿಬದ್ಧ.

ಆದರೆ... ಎವೆರಿ ರೂಲ್ ಹ್ಯಾಸ್ ಎನ್ ಎಕ್ಸೆಪ್ಷನ್!

ಆಟೋ ಒಂದು ಎಲ್ಲಿಂದಲೋ ಸುಯ್ಯನೆ ನುಗ್ಗಿ, ಎರಡು ಸೈಕಲ್ಗಳ ಮಧ್ಯೆ ನುಸುಳಿ, ಒಬ್ಬ ಮುದುಕನ ಮೊಣಕೈನ ಜಾಯಿಂಟ್ಸ್ ರೀಅರೇಂಜ್ ಮಾಡಿ, ಮೂತಿಗೆ ಮೂತಿ ಹತ್ತಿರ ತಂದಿದ್ದ ಒಂದು ಎಲ್ಲೋ ಬೋರ್ಡ್ ಕಾರ್, ಒಂದು ನೀರು ಹೊರುವ ಟ್ರಾಕ್ಟರ್ ಮಧ್ಯೆ ಕಾರ್ಪೆಂಟ್ರಿಯಲ್ಲಿ ಎರಡು ಮರದ ಸಂದಿಗಳ ಮಧ್ಯೆ ಒಂದು ಪೀಸ್ ಇಟ್ಟು ವೆಡ್ಜ್ ಮಾಡುವಂತೆ ವೆಡ್ಜಿಸಿಕೊಂಡಿತು.

ವಾಹನಲೋಕದ ತ್ರಿ-ಶಂಖುಗಳಾದ ಈ ವಾಹನಗಳ ವೈಶಿಷ್ಟ್ಯವೇ ವೈಶಿಷ್ಟ್ಯ!

ಮಣ್ಣಿನ ಮಕ್ಕಳು ಮಣ್ಣು ಬಿಟ್ಟು ನಗರ ಸೇರಿದ ಮೇಲೆ ಅವರನ್ನೇ ಫಾಲೋ ಮಾಡಿಕೊಂಡು ನಗರಕ್ಕೆ ಬಂದ ಷಟ್ಪೀಲಿ ವಾಹನಲೋಕದ ಮೆಳ್ಳಗಣ್ಣಿ! ಮೆಳ್ಳಗಣ್ಣಿನವರು ಎಲ್ಲಿ ನೋಡುತ್ತಿದ್ದಾರೆಂದು ಹೇಗೆ ಹೇಳಲಾಗದೋ ಹಾಗೆಯೇ ಟ್ರಾಕ್ಟರ್ನ ಮೂತಿ ನೋಡಿ ಇದು ಹೀಗೆಯೇ ಹೋಗುವುದು ಎಂದು ಯಾರಿಗೂ ನಿರ್ಧರಿಸಲು ಸಾಧ್ಯವಿಲ್ಲ.

ಕುಣ್ಣೆಕುಡಿ ವೈದ್ಯನಾಥನ್ ವಾಯಿಲನ್ ವಾದನ ಕೇಳಿದ್ದೀರಾ? ಎಲ್ಲೋ ಷಡ್ಜದಲ್ಲೋ, ಕೇದಾರದಲ್ಲೋ, ತಾರಕದಲ್ಲೋ ವಿಹರಿಸುತ್ತಾ ಇದ್ದಕ್ಕಿದ್ದಂತೆ ಮಂದ್ರಕ್ಕೆ ಬಂದು ಅಚ್ಚರಿಗೊಳಿಸುವ ಆ ಚಾಲನೆ ಅದ್ಭುತವಾದದ್ದು. ಆ ಚಾಲನೆಯನ್ನು ಗ್ರಾಫ್ನಲ್ಲಿ ಮಂಡಿಸಿ, ಆ ಗ್ರಾಫ್ ಪ್ರಕಾರವೇ ಯಾವುದಾದರೂ ಚಲನೆಯೆಂಬುದು ಇದ್ದರೆ ಅದೇ ಆಟೋ ಚಲನೆ! ಎಲ್ಲೋ ಆರಂಭವಾಗಿ, ಎಲ್ಲೋ ನಿಂತು, ಇದ್ದಕ್ಕಿದ್ದಂತೆ ಎಕ್ಸ್ಟ್ರೀಮ್ ಲೆಫ್ಟ್ನಿಂದ ಎಕ್ಸ್ಟ್ರೀಮ್ ರೈಟ್ಗೆ ಯಾವುದೇ ಸೂಚನೆ ಕೊಡದೆ ಚಲಿಸುವ ಜಾಣ್ಮೆ, ಕೌಶಲ, ಧೈರ್ಯ, ಬೇರಾವ ವಾಹನಕ್ಕೂ ಸಿದ್ಧಿಸುವುದು ಅಸಾಧ್ಯ.

ಆದರೆ Nothing is impossible ಎನ್ನುತ್ತಾರೆ ನೆಪೋಲಿಯನ್ ಬೋನಪಾರ್ಟೆ.

ಇದನ್ನು ಎಲ್ಲೋ ಬೋರ್ಡ್ ಟ್ಯಾಕ್ಸಿಯವರು ನಂಬಿದ್ದಾರೆ.

ಮುಂದಿನ ಪುಟ ನೋಡಿ ...

ಆಟೋಗಳು ಹೋಗಲು ಹಿಂಜರಿಯುವ ಸಂದಿಯಲ್ಲಿ ಎಲ್ಲೋ ಬೋರ್ಡ್ಗಳು ಸರಸವಾಡುತ್ತವೆ!

ಮೂವರ ಬಾಯಿಯೂ ಬೊಂಬಾಯೇ! ಇವರ ವಾಹನದ ಚಕ್ರಕ್ಕೆ ಸಿಕ್ಕಿ ಏನೇನೂ ಆಗದೆ ಉಳಿದವರು ಇದ್ದಾರೆ. ಆದರೆ ಇವರ ಬಾಯಿಗೆ ಸಿಕ್ಕಿ? ಅದಕ್ಕೇ ಇವರನ್ನು ಜನತೆ ಭೀತ್ಯಾದರಗಳಿಂದ ತ್ರಿ-ಶಂಖುಗಳು ಎನ್ನುತ್ತಾರೆ.

ಟ್ರೈಯಾಂಗಲ್ ಶೇಪ್ನಲ್ಲಿ ನಿಂತ ತ್ರಿ-ಶಂಖುಗಳ ಆರ್ಭಟ ವರ್ಷವಾದರೂ ನಿಲ್ಲುತ್ತಿತ್ತೋ ಇಲ್ಲವೋ. ಆದರೆ ವರ್ಷಧಾರೆ ಹೆಚ್ಚಾದ್ದರಿಂದ ನೆನೆದ ಟ್ರಾಕ್ಟರಿ ವಾಹನದ ಮೂತಿಯನ್ನು ಟೈರನೋಸಾರಸ್ ರೆಕ್ಸ್ ತಿರುಗಿಸುವಂತೆ ತಿರುಗಿಸಿ ಕೋಲ್ಕತ್ತಾದ ಕಿಕ್ಕಿರಿದ ಸಂದಣಿಯಲ್ಲೂ ಸರಾಗವಾಗಿ ಸಾಗುವ ಮಿನಿಸ್ಟರ್ನ ಕಾರಿನಂತೆ ಸುತ್ತಮುತ್ತದ ವಾಹನಗಳ ಸಂದಿಗಳನ್ನು ಭೀತ್ಯಾಸ್ತ್ರದಿಂದ ಹಿಗ್ಗಲಿಸಿ ಹೊರಟೇಬಿಟ್ಟ!

ನಾನು ನನ್ನ ಕಾರನ್ನು ಇಂಚಿಂಚೇ ಮುಂದೆ ತೂರಿಸಿಕೊಂಡು ಹೊರಟೆ. ಕಾರ್ನ ಎಡಗಡೆಯ ಚಕ್ರ ಯಾವುದೋ ದಿಬ್ಬ ಹತ್ತಿ ಇಳಿದಂತಾಯಿತು.

ಢಕ್!!!

ಇದ್ದಕ್ಕಿದ್ದಂತೆ ಕಾರ್ ಏಕಪಾದಾಸನದಲ್ಲಿ ನಿಂತಿತು!

ಅಂದರೆ ಬಲಗಡೆಯ ಚಕ್ರಗಳು ನೆಲದಲ್ಲಿದ್ದರೆ ಎಡಗಡೆಯವು ಹಳ್ಳದ ಮೇಲಿನ ಗಾಳಿಯಲ್ಲಿ!

ಕುಳಿತ ಜಾಗದಿಂದಲೇ ಸೀಟಿನ ಮೇಲೆ ಕೈ ಇಟ್ಟು, ಇಡೀ ಮೈಯನ್ನು ಆ ಕೈಯಮೇಲೆ ಬ್ಯಾಲೆನ್ಸ್ ಮಾಡಿಕೊಂಡು ಮಯೂರಾಸನದಲ್ಲಿ ಎಡಕಿಟಕಿಯಿಂದ ಹೊರನೋಡಿದೆ.

ಆ ಹೊತ್ತಿಗೆ ಸರಿಯಾಗಿ ಹಿಂದಿನ ಬೈಕಿಗ ರೊಯ್ಯೊಯ್ಯ್ ಅನ್ನಿಸಿದ್ದರಿಂದ ಹೆಚ್ಚು ಹೆಡ್ಲೈಟ್ ಬೆಳಕು ಬಿತ್ತು.

ಅಲ್ಲಿ ಡೊಗರು ಇದ್ದದ್ದನ್ನು ತುಂಬಿದ ನೀರು ಸಮರ್ಥವಾಗಿ ಮುಚ್ಚಿತ್ತು. ಆ ಡೊಗರಿನಲ್ಲಿ ಕಾರ್ ಬೀಳದಂತೆ ಬಿದ್ದಿದ್ದ ಒಂದು ಮರದ ಟೊಂಗೆ ತಡೆದಿತ್ತು! ಎಡಚಕ್ರ ಹತ್ತಿದ್ದು ದಿಬ್ಬವಲ್ಲ, ಟೊಂಗೆ!

ಮಯೂರಾಸನದಿಂದ ಕುಕ್ಕುಟಾಸನಕ್ಕೆ ಬಂದು ಕುಕ್ಕರಿಸಿದ ಕಡೆಯಲ್ಲೇ ಅಬೌಟ್ ಟರ್ನ್ ಮಾಡಿ ಕಾರಿನಿಂದಿಳಿದು ಎಡಗಡೆಗೆ, ಟೊಂಗೆಯ ಬಳಿ ಬಂದೆ.

ಬೆಂಗಳೂರಿನಲ್ಲಿ ಸತ್ತರೂ ಜನ ಸಿಗದೆ ಇರಬಹುದು. ಆದರೆ ಕಾರ್ ತಳ್ಳಲು ಬಾರದಿರುವಷ್ಟು ಹೃದಯಹೀನರಲ್ಲ.

'ಮೈ ವೀಲ್ ಪರ್ ಬೈಠ್ತೀ. ತೂ ಅಂದರ್ ಘುಸ್ಕೆ ಕ್ಯಾ ಹೋಗಯಾ ಹೈ ದೇಖೋ ಸಾಬ್' ಎಂದನೊಬ್ಬ ಉದ್ದಗಡ್ಡಿ.

ಸರಿಯೆಂದು ತಲೆಯಾಡಿಸಿ, ಪಕ್ಕದ ಕಾಂಪೌಂಡಿಗೆ ಕಾಲು ಜೋಡಿಸಿ, ಟೊಂಗೆಯ ಮೇಲೆ ಕೈಯಿಟ್ಟು ಹಲಾಸನದ ಭಂಗಿಯಲ್ಲಿ ಕಾರ್ ಕೆಳಗೆ ಮುಖ ತೂರಿಸಿ ಭುಜಂಗಾಸನದಲ್ಲಿ ತಲೆಯೆತ್ತಿ ವೀಕ್ಷಿಸಿದೆ.

ಹಿಂದಿನ ಬೈಕಿಗ ಮತ್ತೆ ರೊಯ್ಯೊಯ್ಯ್ ಅಂದ.

ರೇಡಿಯೇಟರ್ ಹತ್ತಿರಕ್ಕೆ ಟೊಂಗೆಯ ತುದಿಗಳು ತಾಗಿದ್ದವು.

ಏನು ಮಾಡುವುದೆಂದು ತೋಚದೆ ಭುಜಂಗಾಸನದಿಂದ ಹೊರಬಂದು ಗರುಡಾಸನದಲ್ಲಿ ನಿಂತೆ.

'ಪಾರ್ಶ್ವಕೋನಾಸನ್ ಟ್ರೈ ಕರೋ' ಉದ್ದಗಡ್ಡಿ ಉವಾಚ.

ಕಾಲನ್ನು ಕಾಂಪೌಂಡಿಗಾನಿಸಿದಂತೆಯೇ ಟೊಂಗೆಯ ಮೇಲೆ ಇಟ್ಟೆನೋ ಇಲ್ಲವೋ ಅನ್ನುವ ರೀತಿಯಲ್ಲಿ ಇನ್ನೊಂದು ಕಾಲಿಟ್ಟು ಕೈಮೇಲೆ ಮಾಡಿ ಟೊಂಗೆಯಿಂದ ಕಾರನ್ನು ಬಿಡಿಸಲಾರಂಭಿಸಿದೆ. ಎಡಗಾಲು ಉಳುಕಿದಂತಾಯಿತು. ಗಡ್ಡದಾರಿಗೆ ಹೇಳಿದೆ.

'ಠೀಕ್ ಹೈ. ತ್ರಿಕೋನಾಸನ್ ಕರೋ'

ಭಾರ ಬಲಗಾಲಿಗೆ ಟ್ರಾನ್ಸ್ಫರ್ ಆಯಿತು. ಮತ್ತಷ್ಟು ಟೊಂಗೆ ಕಿತ್ತೆ.

ಬಲಗಾಲೂ ಉಳುಕಿತು.

ಕಾರ್ ತೂಗಾಡಲಾರಂಭಿಸಿತು.

'ಕುಛ್ ತೋ ಕರೋ. ಗಾಡಿ ಹಿಲ್ ರಹಾ ಹೈ' ಉದ್ದಗಡ್ಡಿ ಹಿಸ್ಟರಿಕ್ ಆಗಿದ್ದ.

ಉತ್ಥಾನಪಾದಾಸನದಲ್ಲಿ ಎರಡೂ ಕಾಲುಗಳನ್ನು ಜ್ಯಾಕ್ನಂತೆ ಕೊಟ್ಟೆ.

ಸೊಂಟವೂ ಉಳುಕಿತು.

ಕಾರ್ ಮತ್ತಷ್ಟು ವಾಲಿತು.

ಇದ್ದಕ್ಕಿದ್ದಂತೆ ಧಡಬಡ ಸದ್ದಾಯಿತು.

ಅದೇ ನೀರಿನ ಟ್ರಾಕ್ಟರ್ ಹಿಂದಿನ ಸರತಿಗಿಂತ ಜೋರಾಗಿ ನುಗ್ಗಿ ಬಂದ. ಮುಂದಿನ ಚಕ್ರ ನನ್ನ ಕಾರನ್ನು ದಾಟಿ ಸಾಗಿತು.

ಆ ಆಟೋ, ಟ್ಯಾಕ್ಸಿ ಇನ್ನೂ ಜಗಳವಾಡುತ್ತಾ ಅಲ್ಲೇ ಇದ್ದರು.

ಟ್ರಾಕ್ಟರ್ ಅವರನ್ನು ಅವಾಯ್ಡ್ ಮಾಡಿದ.

ಹಿಂದಿದ್ದ ನೀರಿನ ಟ್ಯಾಂಕರ್ ನನ್ನ ಕಾರ್ಗೆ ರಭಸದಿಂದ ಹೊಡೆಯಿತು.

ಮುಂದಿನ ಪುಟ ನೋಡಿ ...

ಕಾರ್ ಒಲಿಂಪಿಕ್ಸ್ನಲ್ಲಿ ಚೀನೀಯರು ನೆಗೆಯುವಂತೆ ಒಮ್ಮೆಗೆ ನೆಗೆಯಿತು. ಟೊಂಗೆ ನನ್ನ ಮೂತಿಗೆ ಬಡಿಯಿತು. ಉದ್ದಗಡ್ಡಿ 'ಮರ್ ಗಯಾ ರೇ' ಎಂದ.

ಟೊಂಗೆಗೂ, ಕಾಂಪೌಂಡಿಗೂ ಮಧ್ಯ ಸಿಲುಕಿದ್ದ ಮೂತಿಯನ್ನು ಬಿಡಿಸಿಕೊಂಡು ಗಡ್ಡದಾರಿಗೆ ಏನಾಗಿದೆಯೆಂದು ನೋಡಲು ಹೋದೆ. ಕಾರ್ ಜರ್ಕ್ ಆದ ರಭಸಕ್ಕೆ ಬಾಗಿಲು ಹಾಕಿಕೊಂಡು ಮಧ್ಯದಲ್ಲಿ ಗಡ್ಡ ಸಿಲುಕಿ ಉದ್ದಗಡ್ಡಿ ಗಿಡ್ಡಗಡ್ಡಿ ಆಗಿದ್ದ.

ಮಳೆ ನಿಂತಿತು.

ಗಿಡ್ಡಗಡ್ಡಿಯಾದ ಉದ್ದಗಡ್ಡಿಗೆ ಕಾರಿನಲ್ಲಿದ್ದ ಗ್ರೋ ಹೇರ್ ಶಾಂಪೂ ನೀಡಿದೆ.

ಮನೆಗೆ ಬಂದೆ. ಹತ್ತುಗಂಟೆಗಳ ಕಾಲ ಶವಾಸನ ಹಾಕಿದೆ.

ಕಣ್ಣುಬಿಟ್ಟೆ.

ಜೂನ್ 21!

ವಿಶ್ವ ಯೋಗ ದಿನ!

ನಿನ್ನೆ ರಾತ್ರಿ ಹಾಕಿದ ಆಸನಗಳೆಲ್ಲಾ ಜ್ಞಾಪಕಕ್ಕೆ ಬಂದವು.

ಮತ್ತೆ ಶವಾಸನಕ್ಕೆ ಮರಳಿದೆ. ▪

ಸುಮ್ಮ ನಕ್ಕಿಡಿ



ಸ್ನಾನ, ಬಟ್ಟೆ ಮನೆ ಎಲ್ಲಾ ಇದರಲ್ಲೇ ತೊಳೀತಾ ಇದ್ದಾರೆ.... ನೀರು ಖಾಲಿ !

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚೆಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಬೆಕ್ಕು ಬಾವುಲಿ

ಕನಕಾಪುರ ನಾರಾಯಣ

ಮರದಿಂದ ಮರಕ್ಕೆಹಾರುತ್ತಾ ಬಾವುಲಿಯೊಂದು ನೆಲಕ್ಕೆ ಬಿದ್ದಿತು. ಹಸಿದ ಬೆಕ್ಕೊಂದು ಹತ್ತಿರದಲ್ಲೇ ಅವಿತು ಕುಳಿತಿತ್ತು. ನೆಲಕ್ಕೆ ಬಿದ್ದ ಬಾವುಲಿಯನ್ನು ಕಂಡಿತು. ಬೆಕ್ಕು ತಕ್ಷಣ ಅದರ ಮೇಲೆರಗಿತು, ಭಯಗೊಂಡ ಬಾವುಲಿ "ನನ್ನನ್ನು ಕೊಲ್ಲಬೇಡ" ಎಂದು ಬೇಡಿಕೊಂಡಿತು. ಆಗ ಬೆಕ್ಕು"ಪಕ್ಷಿಗಳು ನಮ್ಮ ಆಜನ್ಮ ಶತ್ರುಗಳು. ಅವನ್ನು ನಾವೆಂದೂ ಜೀವಸಹಿತ ಬಿಡೆವು" ಎಂದಿತು. ತಕ್ಷಣ ಬಾವುಲಿ "ನಾವು ಇಲಿಗಳ ಜಾತಿಗೆ ಸೇರಿದವರು, ಪಕ್ಷಿಯಲ್ಲ" ಎಂದಿತು. ಬೆಕ್ಕು ಬಾವುಲಿಯನ್ನು ಕೊಲ್ಲದೆ ಹಾಗೇ ಬಿಟ್ಟಿತು.

ಸ್ವಲ್ಪ ದಿನಗಳ ಬಳಿಕ ಮತ್ತೊಮ್ಮೆ ಆ ಬಾವುಲಿ ಹಾರಾಡುತ್ತಿರಲು ನೆಲಕ್ಕೆ ಬಿದ್ದಿತು. ಆದರೆ ಈ ಬಾರಿ ಬೇರೊಂದು ಬೆಕ್ಕು ಅದನ್ನು ಹಿಡಿಯಿತು. ಬಾವುಲಿ ಮತ್ತದೇ ರೀತಿ ಪ್ರಾಣಭಿಕ್ಷೆ ಬೇಡಿತು. ಬೆಕ್ಕು ತಾನು ಇಲಿಗಳನ್ನು ಮಾತ್ರ ತಿನ್ನುವುದು ಎಂದಿತು. ಕೂಡಲೇ ಬಾವುಲಿಯು "ಆದರೆ ನಾನು ಇಲಿಯಲ್ಲ..... ನಾನು ಪಕ್ಷಿ ಜಾತಿಗೆ ಸೇರಿದವ" ಎಂದಿತು. ಅದನ್ನು ನಂಬಿದ ಬೆಕ್ಕು ಬಾವುಲಿಯನ್ನು ಕೊಲ್ಲದೇ ಹಾಗೇ ಬಿಟ್ಟಿತು. ಸಮಯಕ್ಕೆ ತಕ್ಕ ಉತ್ತರ ಪ್ರಾಣವನ್ನು ಉಳಿಸಿತು ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"



ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ರವೆ ಹುಗ್ಗಿ (ಪೊಂಗಲ್)

ಬೇಕಾಗುವ ಸಾಮಗ್ರಿಗಳು

- ಒಂದು(ಲೋಟ) ಅಳತೆ ರವೆಗೆ ಮುಕ್ಕಾಲು ಅಳತೆ ಹೆಸರು ಬೇಳೆ
- ಎರಡು ಚಮಚ ಉಪ್ಪು, ಒಂದು ಚಮಚ ಮೆಣಸು, ಒಂದು ತುಂಡು ಹಸಿ ಶುಂಠಿ
- ಮೂರು ಚಮಚ ಗೋಡಂಬಿ, ಅರ್ಧಲೋಟ ತುಪ್ಪ

ಮಾಡುವ ವಿಧಾನ

- ರವೆ ಮತ್ತು ಹೆಸರುಬೇಳೆಯನ್ನು ಬೇರೆ ಬೇರೆಯಾಗಿ ತುಪ್ಪದಲ್ಲಿ ಹುರಿದುಕೊಳ್ಳಿ. ಉಳಿದ ತುಪ್ಪ ಬಾಣಲೆಗೆ ಹಾಕಿ ಕಾದ ನಂತರ ಗೋಡಂಬಿ, ಮೆಣಸು, ಜೀರಿಗೆ ಶುಂಠಿ ಹಾಕಿ. ಅದು ಸೀದು ಹೋಗುವ ಮೊದಲೇ ನಾಲ್ಕು ಲೋಟ ನೀರು ಸುರಿಯಿರಿ
- ಕುದಿಯಲು ಆರಂಭವಾದಾಗ ಉಪ್ಪು ಹಾಕಿ ನಂತರ ಹುರಿದ ರವೆ ಮತ್ತು ಹೆಸರು ಬೇಳೆ ಬೆರೆಸಿ
- ಗಟ್ಟಿ ಎನಿಸಿದಲ್ಲಿ ಮತ್ತೊಂದು ಲೋಟ ಬಿಸಿನೀರು ಬೆರೆಸಿ

ರೆಸಿಪಿ ಕೊಡ್ತೀರಾ!

ಒಂದರ ಲ್ಲೊಂದು ಒಗಟು

೧.ಹಿರಿಯರಿಗೆ ನಮಸ್ಕರಿಸುವಾಗ ಸ್ಪರ್ಶಿಸುವ ಮೂರಕ್ಷರದ ಅಂಗವಿದು
೨.ಮೊದಲೆರೆಡಕ್ಷರವು ಒಂದೇ ಜಾಗದಲ್ಲಿ ನಿಲ್ಲುವದಿಲ್ಲವೆಂದು ಸೂಚಿಸುವುದು
೩.ಕೊನೆಯೆರಡು ಕೂಡಿದರೆ ಯುದ್ಧದ ಸಮಾನಾರ್ಥಕವಾಗುವುದು
೪ ಮೊದಲಿಗೆ ಕೊನೆಯಕ್ಷರ ಸೇರಿ ಸಮಯದ ಒಂದು ಸಣ್ಣ ಅಳತೆಯಾಗುವುದು

ಉತ್ತರಕ್ಕೆ ಪುಟ ೮ ನೋಡಿ

ಪ್ರಲಾಪ ...

ಏಕೆ ದೂರ ಹೋದೆ ಚಿನ್ನ
ಬರದೆ ನನ್ನ ಬಾಳಿಗೆ
ನನ್ನ ಬಿಟ್ಟೆ ಕೊರಳ ಕೊಟ್ಟೆ
ಅರಿಯದವನ ತಾಳಿಗೆ

ನನ್ನ ಹೃದಯದಲ್ಲಿ ನಿನ್ನ
ಮೂರುತಿಯನು ನಿಲ್ಲಿಸಿ
ವರವ ಮಾತ್ರ ಅವಗೆ ಇತ್ತೆ
ಆರತಿಯನು ಸಲ್ಲಿಸಿ

ನಾಕವಾದೆ ಅವಗೆ ನೀನು
ಶಾಖವಾದೆ ಹೊರಳಲಿ
ನರಕವಾದೆ ನನಗೆ ನಾನೆ
ಶೋಕ ಇಳಿಸಿ ಒಡಲಲಿ

ದೀಪವಾಗಿ ಬೆಳಗುತಿರುವೆ
ಅವನ ಎದೆಯ ಗುಡಿಯಲಿ
ತಾಪದಿಂದ ಬೇಯುತಿರುವೆ
ನಿನ್ನ ನೆನಪಿನಡಿಯಲಿ

ಸೂಸುತಿರುವ ಹೂವು ನೀನು
ನನ್ನ ಬಾಳ ಲತೆಯಲಿ
ಮಾಸಿಹೋದ ಪುಟವು ನಾನು
ನಮ್ಮ ಪ್ರೇಮ ಕಥೆಯಲಿ

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. 'ದಾರೋಜಿ', ಇದು ಎಲ್ಲಿದೆ? ಈ ಸ್ಥಳದ ವಿಶೇಷವೇನು?

೨. 'ಅಣಶಿ' ರಾಷ್ಟ್ರೀಯ ಉದ್ಯಾನವನ ಎಲ್ಲಿದೆ? ಇದು ಯಾವ ವನ್ಯಮೃಗದ ಸಂರಕ್ಷಣೆಗಾಗಿ ಮೀಸಲಾಗಿದೆ?

ಸರಿ ಉತ್ತರಕ್ಕೆ ಪುಟ ೧೫ ನೋಡಿ

ಒಂದರಲ್ಲೊಂದು ಒಗಟು – ಉತ್ತರ

೧. ಚರಣ ೨. ಚರ ೩.ರಣ ೪. ಚಣ

ಹಾಸ್ಯ ಚಿಲುಮೆ

ಹುಚ್ಚಾಸ್ಪತ್ರೆಯಲ್ಲಿ ಕೇಳ್ಸಿದ್ದು
"ನಿನ್ನ ಹೆಸರೇನು"
"ಪಂಡಿತ್ ನೆಹರೂ"
ಕೆಲಸ?, ... ಭಾರತದ ಪ್ರಧಾನಿ,
ಯಾವೋನ್ ಹಂಗಂತ ಹೇಳಿದ್ದು? ,,,,
"ದೇವರು" ಎಂದ,
ತಕ್ಷಣ ಪಕ್ಕದಲ್ಲಿ ಕುಳಿತಿದ್ದವ
"ನಾನ್ ಹಾಗೆ ಹೇಳಿಲ್ಲಪ್ಪ!" ಅನ್ನಬೇಕೇ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಅಕ್ಕನ ಗಂಡನನ್ನು ಮೊಟಕುಗೊಳಿಸುವ ಸಾಧ್ಯತೆ.

೨. ಆಹಾ! ಅಂತಿಂತಹುದು ಇದಲ್ಲ, ಇದರಂತಹುದು ಬೇರಿಲ್ಲ.



೩. ರಸಗಳಿಗೆಯಲ್ಲಿ ಏಕೆ ಈ ಮನಸ್ತಾಪ.

೪. ಮೋಹಿನಿ ಭಸ್ಮಾಸುರ ಶಿಖರಗಳಿರುವ ಸೊಬಗಿನ ತಾಣ.

೫.ಭಕ್ತವತ್ಸಲನಲ್ಲಿ ತುಂಬಿರಬೇಕಾದ ಭಾವ.



೬. ಚಪಾತಿ ಮಾಡಲು ಬಾರದೆ ಪಟ್ಟ ಪಾಡಿಗೆ, ಹೀಗೆನ್ನುವುದೇ ಸರಿ.

ಉತ್ತರ: ಅಳಿವಿನಂಚಿನಲ್ಲಿರುವ ಕಾಡು ಪ್ರಾಣಿಗಳು,

ನಿರ್ಭೀತಿಯಿಂದ ಇಲ್ಲಿರಬಹುದೇನು?

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಜುಲೈ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಜೂನ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಶುಭಶ್ರಿ, ಸಿದ್ನಿ
- ಸುಮ ಅಶೋಕ್, ಸಿದ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಬಿ.ಆರ್. ವತ್ಸಲಾ ದ್ವಾರಕನಾಥ್, ಕೆ.ಜಿ.ಎಫ್
- ಬಿ. ಆರ್. ಪುಷ್ಪವಲ್ಲಿ ಚಂದ್ರಶೇಖರ್, ಕೆಂಗೇರಿ ಉಪನಗರ

ಜೂನ್ ತಿಂಗಳ ಪದಪುಂಜದ ಉತ್ತರ

೧. ಒಳ್ಳೆಯದಾಗಲಿ ಎಂದು ಆಶೀರ್ವದಿಸಿದಾಗಲೆಲ್ಲ ಶಿವನು ಜೊತೆಗಿರುತ್ತಾನೆ.

ಹ	ರ	ಸು

೨. ಅನಾದಿ ಕಾಲದಲ್ಲಿ ಹಾಕಿದ್ದೇನು ಭದ್ರವಾದ ಈ ಅಡಿಪಾಯ?

ಬು	ನಾ	ದಿ

೩. ಆಹಾ! ವತ್ಸಲಾಳ ಬಗ್ಗೆ ಅದೇನು ಮಮತೆ.

ವಾ	ತ್ಸ	ಲ್ಯ

೪.ಅತ್ತ ಹೋಗಿ ಇತ್ತ ಹಿಂದಿರುಗಿ ಬರುವಷ್ಟರಲ್ಲಿ ಕಾಡೇ ಹೊಸದಾಗಿ ಬಿಟ್ಟಿತ್ತು.

ನ	ವ

೫. ಹೂವಿನ ಬೆಲೆ ಎಷ್ಟಮ್ಮ ಎಂದರೆ, ಬಲಿ ತೆಗೆದುಕೊಳ್ಳುವ ದೇವತೆಗಾದರ

೨೦ ರೂಪಾಯಿ ಎಂದಳಲ್ಲಾ! ಇದ್ಯಾವ ಲೆಕ್ಕವಪ್ಪ.

ಮಾ	ರಿ	ಗೆ

ಉತ್ತರ: ಛೇ. ಈ ಸುದ್ದಿಯನ್ನು ಕೇಳಿ ನಿಮಗೆ ಮರ್ಯಾದೆಯೇನೂ ಹೋಗುವುದಿಲ್ಲ.

ಇನ್ನೂ, ಹೊರಗೆ ಸುತ್ತಾಡಲು ಸಹಾಯವಾಗಬಹುದು.

ಹ	ವಾ	ಮಾ	ನ	ವ	ರ	ದಿ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

NRI SEVA
Educational, Legal, financial, Health, Reality management services
Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852



ಶಿವನ ಕಣ್ಣು - ೭- ೧೩- ರಚನೆ - ಪದ್ಮಾವತಿ ಶರ್ಮ, ಬೆಂಗಳೂರು

ಲೇಖಕರು:
ನಾಗಶೈಲ ಕುಮಾರ್

ಕೆಳದಿಯ ಚೆನ್ನಮ್ಮ

ಕುಂದಾಪುರದ ಶ್ರೇಷ್ಠಿ ಸಿದ್ದಪ್ಪ ಶೆಟ್ಟರಿಗೆ ತಮ್ಮ ಕಿವಿಗಳನ್ನು ನಂಬಲಾಗಲಿಲ್ಲ. ಬಿದನೂರಿನ ಅರಮನೆಯಿಂದ ಬಂದಿರುವ ಸುದ್ದಿ ಅಂತಹದಾಗಿತ್ತು. ಇಷ್ಟು ದಿನಗಳ ಕಾಲ ಮದುವೆಯೇ ಬೇಡವೆಂದು ಅನೇಕ ರಾಜ ಮನೆತನಗಳ ಸಂಬಂಧಗಳು ಬಂದರೂ ನಿರಾಕರಿಸಿ ವಿವಾಹವಾಗದೆಯೇ ಉಳಿದಿದ್ದ ರಾಜ ಸೋಮಶೇಖರ ನಾಯಕ ನಾಡಿನ ಪ್ರಜೆಗಳ ಮನಸ್ಸಿನಲ್ಲಿ ಕಳವಳ ಮೂಡಿಸಿದ್ದ. ಅನುಪಮ ಚೆಲುವನಿಗೆ ಕನ್ಯೆಯರನ್ನು ಕೊಡಲು ಅನೇಕ ರಾಜಮನೆತನದವರು ತುದಿಗಾಲಿನಲ್ಲಿ ನಿಂತಿದ್ದರು. ಅಂತಹ ಅರಸು ತನ್ನ ಮಗಳನ್ನು ಬಯಸಿದ್ದಾನೆಂದಾಗ, ಸಿದ್ದಪ್ಪಶೆಟ್ಟರ ಸಂತೋಷಕ್ಕೆ ಪಾರವೇ ಇಲ್ಲದಂತಾಗಿತ್ತು.

ಮೊದಲು ಆಶ್ಚರ್ಯವಾದುದು ಪ್ರಧಾನಿ ತಿಮ್ಮಣ್ಣನಾಯಕರಿಗೆ, ಈ ತಮ್ಮ ಯುವರಾಜ ಎಲ್ಲಿ ಜೀವನ ಪರ್ಯಂತ ಮದುವೆಯಾಗದೆಯೇ ಉಳಿದುಬಿಡುತ್ತಾನೋ ಎಂದು ಚಿಂತಾಕ್ರಾಂತರಾಗಿದ್ದರು. ನಂತರ ರಾಮೇಶ್ವರದ ಜಾತ್ರೆಯಲ್ಲಿ ಕಂಡ ಬಾಲೆಯನ್ನು ತಾನು ವರಿಸುತ್ತೇನೆಂದು ಯುವರಾಜ ಹೇಳಿದ, ಕೇಳಿ ಸಂತಸವಾದರೂ, ಆ ಹುಡುಗಿ ರಾಜಮನೆತನಕ್ಕೆ ಸೇರಿದವಳಲ್ಲವೆಂದು ಹಿಂಜರೆದರೂ, ಅವಳನ್ನು ಹೊರತಾಗಿ ಬೇರಾರನ್ನೂ ತಾನು ಮದುವೆಯಾಗಲಾರೆ ಎಂದಾಗ ಸಮ್ಮತಿಸಿದ್ದರು.

ಈ ಸುದ್ದಿ ಸತ್ಯವೆಂದು ಅರಿವಾದ ಮೇಲೆ ತನ್ನ ಕುವರಿಯ ಭಾಗ್ಯಕ್ಕೆ ಎಣೆಯೇ ಇಲ್ಲವೆಂದು ಸಿದ್ದಪ್ಪಶೆಟ್ಟಿಯೂ ಬೀಗಿದ. ಅಷ್ಟೇ ಅಲ್ಲ ತನ್ನ ಪುತ್ರಿಯೂ ಸಹ ಈ ಸಂಬಂಧ ಪಡೆಯಲು ಯೋಗ್ಯಳೆಂದೇ ಅವನ ಭಾವನೆ.

ಬಾಲಕಿ ಚೆನ್ನಮ್ಮ, ಪರಮ ದೈವ ಭಕ್ತೆ, ಅಪ್ರತಿಮ ಚೆಲುವೆ, ಸದ್ಗುಣ ಸಂಪನ್ನೆ, ವಿದ್ಯಾವಂತೆ, ಧೀರೆ, ಕರುಣಾಳು, ಏನಿದ್ದರೂ ರಾಜಕುಲದಲ್ಲಿ ಹುಟ್ಟಿಲ್ಲವೆಂಬುದೊಂದಷ್ಟೇ ಕುಂದು. ಅವಳನ್ನು ವರಿಸುವ ಯಾರೇ ಆಗಿರಲಿ ಅದೃಷ್ಟಶಾಲಿಯೇ ಸೈ.

ಚೆನ್ನಮ್ಮನೂ ಅಷ್ಟೇ, ತನ್ನ ಅದೃಷ್ಟಕ್ಕೆ ಬೆರಗಾಗಿದ್ದಳು. ಸೋಮಶೇಖರ ನಾಯಕನ ಅಧಿಕಾರ, ಅಂತಸ್ತು, ಚೆಲುವಿನಿಂದಾಗಿ ಅವಳು ಮರುಳಾಗಿರಲಿಲ್ಲ. ಆದರೆ ಅವನ ಶೌರ್ಯ, ಸದ್ಗುಣಗಳ ಬಗ್ಗೆ ಕೇಳಿದ್ದ ಅವಳ ಮನಸ್ಸು ಉಲ್ಲಾಸದಿಂದ ಹೂವಾಗಿತ್ತು.

****

ಬಿದನೂರಿನ ಅರಮನೆಯಲ್ಲಿ ವಿಜೃಂಭಣೆಯ ವಿವಾಹ ಜರುಗಿತ್ತು. ಶಿವ-ಪಾರ್ವತಿಯರಂತಹ ಜೋಡಿ. ರೂಪ, ಗುಣ ಎರಡರಲ್ಲೂ ಹೇಳಿ ಮಾಡಿಸಿದಂತಹ ಹೊಂದಾಣಿಕೆ. ಇಂತಹ ರಾಜ-ರಾಣಿಯರು ದೊರೆತಿರುವುದು ನಮ್ಮ ಭಾಗ್ಯವೆಂದು ಕೊಂಡಾಡುತ್ತಾ ಪ್ರಜೆಗಳು ಹೆಮ್ಮೆಯಿಂದ ಬೀಗಿದರು. ರಾಜ್ಯದ ಎಲ್ಲೆಡೆಯ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ಜರುಗಿದವು, ಬಡಬಗ್ಗರಿಗೆ ದಾನಗಳ ಏರ್ಪಾಡಾಯಿತು.

ಬಲುಬೇಗ ಚೆನ್ನಮ್ಮ ಸೋಮಶೇಖರನಾಯಕನ ಮೆಚ್ಚಿನ ಮಡದಿಯಾಗಿ, ಪ್ರಜೆಗಳ ಪ್ರೀತಿಯ ರಾಣಿಯಾಗಿ ಸ್ಥಾನ ಪಡೆದಳು. ರಾಜನೊಡನೆ ಭಾಗಿಯಾಗಿ, ರಾಜ್ಯದ ಸಕಲ ವ್ಯವಹಾರಗಳು, ಶಸ್ತ್ರಾಸ್ತ್ರ ಪ್ರಯೋಗಗಳಲ್ಲಿ ಪರಿಣಿತಿ ಪಡೆದಳು. ಸಂಗೀತದಲ್ಲಿ ಪಾರಂಗತಳಾಗಿ, ಸಾಹಿತ್ಯಗಳಲ್ಲಿ ಅಪಾರ ಆಸಕ್ತಿ ತೋರಿಸಿದುದೇ ಅಲ್ಲದೆ ಸಾಕಷ್ಟು ಉತ್ತೇಜನ ನೀಡಿದಳು. ಅರಮನೆಯ ಕೆಲಸಗಾರರಿಗೆ ಅಚ್ಚುಮೆಚ್ಚಿನ ಒಡತಿಯಾಗಿ, ನಾಯಕನಿಗಿಂತ ಹೆಚ್ಚಾಗಿ ಚೆನ್ನಮ್ಮನಲ್ಲಿ ಅವರು ಪ್ರೀತಿ ವಿಶ್ವಾಸ ಇರಿಸಿದ್ದರು. ಯಾವುದೇ ನ್ಯಾಯ ತಿರ್ಮಾನವಾಗಬೇಕಾಗಿದ್ದಲ್ಲಿ, ಮೊದಲು ರಾಣಿಯ ಬಳಿ ಹೋಗಿ ನಂತರ ರಾಜನನ್ನು ಸಮೀಪಿಸುತ್ತಿದ್ದರು. ಪ್ರಜೆಗಳು ರಾಣಿ ಚೆನ್ನಮ್ಮನನ್ನು ತಮ್ಮ ಪಾಲಿನ ಪ್ರತ್ಯಕ್ಷ ದೇವತೆಯೆಂದೇ ಭಾವಿಸಿದ್ದರು. ರಾಜ್ಯದಲ್ಲಿ ನೆಮ್ಮದಿ ಎಲ್ಲೆಡೆ ಕಾಣುತ್ತಿತ್ತು. ಎಲ್ಲಾ ಮತಗಳಿಗೂ, ಧರ್ಮಗಳಿಗೂ ಗೌರವವಿತ್ತು. ಸಾಹಿತ್ಯ, ಸಂಗೀತ, ಕಲೆ ಎಲ್ಲಕ್ಕೂ ಮನ್ನಣೆಯಿತ್ತು.

ಕಾರ್ಮೋಡ ಕವಿದಾಗ

ವಿಜಯನಗರ ಸಾಮ್ರಾಜ್ಯದ ಹೆಮ್ಮೆಯ ಕೊಡುಗೆಯಾದ ದಸರಾ ನಾಡಹಬ್ಬದ ಆಚರಣೆ ಕೆಳದಿ ಸಾಮ್ರಾಜ್ಯದಲ್ಲೂ ಮುಂದುವರೆದಿತ್ತು. ಅನೇಕ ಪ್ರತಿಭಾವಂತ ಕಲಾವಿದರ ಪ್ರತಿಭೆಯ ಪದರ್ಶನದೊಡನೆ ಈ ಸಲದ ನಾಡಹಬ್ಬಕ್ಕೆ ವಿಶೇಷ ಆಕರ್ಷಣೆಯಾಗಿ ಜಂಬುಖಂಡಿಯ ಕಲಾವತಿಯ ನೃತ್ಯ ಪ್ರದರ್ಶನ ಏರ್ಪಾಡಾಗಿತ್ತು.

ಮುಂದಿನ ಪುಟ ನೋಡಿ ...

ನಾಟ್ಯದಲ್ಲಿ ನವಿಲಾಗಿ, ಸಂಗೀತದಲ್ಲಿ ಕೋಗಿಲೆಯಾಗಿ, ಅಪ್ರತಿಮ ಚೆಲುವೆ ಕಲಾವತಿ ಜನಮನ ಸೂರೆಗೊಂಡಳು. ಅವಳ ಕಲೆಯನ್ನು ಅಪಾರವಾಗಿ ಮೆಚ್ಚಿ ಅವಳಿಗೆ ಕಾಣಿಕೆಗಳನ್ನಿತ್ತರೂ, ರಾಣಿ ಚೆನ್ನಮ್ಮಳ ಹೃದಯದಲ್ಲಿ ಅಳುಕು ಮೂಡಿಸಿದ್ದು, ತನ್ನ ಪತಿ ಸೋಮಶೇಖರನಾಯಕ ಕಲಾವತಿಯಲ್ಲಿ ಅವಶ್ಯಕ್ಕಿಂತಲೂ ಹೆಚ್ಚಾಗಿ ತೋರಿದ ಆಸಕ್ತಿ. ಅಷ್ಟಲ್ಲದೆ ಕಲಾವತಿಯ ಸಾಕುತಂದೆ ಭರಮೆಮಾವುತನ ಸ್ವಭಾವವೂ ವಿಪರೀತ ಕೃತ್ರಿಮವಾಗಿದ್ದು, ಅವನಲ್ಲಿ ಯಾವುದೋ ಅಪಾಯಕಾರಿ ಸಂಚಿನ ಸೂಚನೆ ರಾಣಿಗೆ ಕಂಡಿತು. ಕಲಾವತಿಯ ಕುಟುಂಬದ ಸೆಳೆತಕ್ಕೆ ಒಳಗಾದ ನಾಯಕ ಅವಳನ್ನು ಆಸ್ಥಾನ ನರ್ತಕಿಯಾಗಿ ಘೋಷಿಸಿದ. ರಾಜನಿಗೆ ಸಂತಾನವಿಲ್ಲದ ವಿಷಯವನ್ನು ಮುಂದಿರಿಸಿಕೊಂಡು ಭರಮೆಮಾವುತ, ಔಷಧಿಯನ್ನು ಕೊಡುವ ನೆಪದಲ್ಲಿ ರಾಜನನ್ನು ತನ್ನ ಮನೆಗೇ ಕರೆದೊಯ್ದ. ಅವನ ಔಷಧ, ಕಲಾವತಿಯ ಮೇಲಿನ ಮೋಹ, ಇವುಗಳ ಪರಿಣಾಮ ನಾಯಕನ ಮೇಲೆ ತೋರಲಾರಂಭಿಸಿತು. ಅರಮನೆಗೆ ಹೋಗುವುದನ್ನೇ ನಿಲ್ಲಿಸಿದ. ರಾಜಕಾರಣದ ವಿಷಯಗಳನ್ನು ಮಂತ್ರಿಗಳು, ಅಧಿಕಾರಿಗಳು ಕಲಾವತಿಯ ಮನೆಗೇ ಬಂದು ಮಾತನಾಡಬೇಕಾಯಿತು. ತನ್ನ ಪಾಲಿನ ಭಾಗ್ಯದೇವತೆಯಾದ ಚೆನ್ನಮ್ಮನನ್ನೇ ಮರೆತು, ಭರಮೆನಾಯಕನ ವಿಷದ ಮಾತುಗಳಿಗೆ, ಔಷದಗಳಿಗೆ ದಾಸನಾಗಿ ತನ್ನ ಮನಸ್ಸು, ಆರೋಗ್ಯ ಎರಡನ್ನೂ ಹದಗೆಡಿಸಿಕೊಂಡ.

ಚೆನ್ನಮ್ಮನ ಕನಸಿನ ಗೋಪುರ ಕುಸಿಯಿತು. ಅನಾರೋಗ್ಯ ಪೀಡಿತನಾದ ದೊರೆ ತೀರಿಕೊಂಡರೆ, ಮುಂದೆ ರಾಜ್ಯವನ್ನಾಳುವವರು ಯಾರು ಎಂಬ ಗೊಂದಲ ಪ್ರಜೆಗಳಲ್ಲಿ ತಲೆದೋರಿತು. ಅಪಾರ ಸಂಪತ್ತಿನ ಕಣಜವಾದ ಕೆಳದಿ ಸಂಸ್ಥಾನದ ಮೇಲೆ ವಿಜಾಪುರದ ಸುಲ್ತಾನನಿಗೆ ಸದಾ ಕಣ್ಣು, ಅವನು ಸುಸಮಯಕ್ಕಾಗಿ ಕಾಯುತ್ತಿದ್ದ. ಇಂತಹ ಸಮಯದಲ್ಲಿ ಚೆನ್ನಮ್ಮ, ರಾಜ್ಯದ ಒಳಿತಿನ ಸಲುವಾಗಿ ಕಠಿಣ ತೀರ್ಮಾನಗಳನ್ನು ತೆಗೆದುಕೊಳ್ಳಲೇಬೇಕಾಗಿತ್ತು. ತನ್ನ ಅಂತಸ್ತು, ಅಧಿಕಾರ, ಸ್ಥಾನಮಾನಗಳ ಅಭಿಮಾನವನ್ನು ಬದಿಗೊತ್ತಿ ರಾಜನ ಮನವೊಲಿಸಲು ಸ್ವತಃ ಭರಮೆಮಾವುತನ ಮನೆಗೇ ಹೋದಳು.

“ದೊರೆ, ಚೌಡಪ್ಪನಾಯಕ, ಸದಾಶಿವ ನಾಯಕ, ವೆಂಕಟಪ್ಪನಾಯಕರಂತಹ ಧೀರ ನಾಯಕರುಗಳು ಕಟ್ಟಿ ಬೆಳೆಸಿದ ಸಾಮ್ರಾಜ್ಯವಿದು. ನಿಮ್ಮ ಹಿರಿಯರಾದ, ಸಮರ್ಥರೂ, ಶೂರರೂ, ಪ್ರಜಾನುರಾಗಿಗಳೂ ಕೆಳದಿಯ ವಂಶವನ್ನು ಕನ್ನಡನಾಡಿನ ಮುಕುಟಮಣಿಯನ್ನಾಗಿ ಬೆಳಗಿಸಿದ ಶಿವಪ್ಪನಾಯಕರ ರಕ್ತವೇ ನಿಮ್ಮಲ್ಲಿ ಹರಿಯುತ್ತಿದೆ. ಅವರೆಲ್ಲರನ್ನೂ ಮೀರಿಸುವಂತಹ ಶಕ್ತಿ, ಯುಕ್ತಿ, ಸಾಮರ್ಥ್ಯಗಳು ನಿಮಗಿದೆ ಪ್ರಭು. ವಿಜಯನಗರದ ಪ್ರತಿನಿಧಿಯಾಗಿ, ಹಿಂದೂ ಧರ್ಮದ ಉತ್ಥಾನಕ್ಕಾಗಿ, ಕನ್ನಡ ನಾಡಿನ ಅಭ್ಯುಧಯಕ್ಕಾಗಿ ಪಣತೊಟ್ಟು ದುಡಿಯುತ್ತಿರುವ ರಾಜ್ಯ ನಮ್ಮದು. ನಮ್ಮ ನಾಡಿನ ಜನತೆಯ ಕಣ್ಮಣಿಯಾಗಿದ್ದ ನಿಮಗೆ ಇಂದು ಏನಾಗಿದೆ. ಒಮ್ಮೆ ಮನಸ್ಸಿನ ಕಣ್ಣನ್ನು ತೆರೆದು ನೋಡಿ, ನಿಮಗಾಗಿ, ಜನತೆ, ಈ ರಾಜ್ಯ ಎಷ್ಟು ಪರಿತಪಿಸುತ್ತಿದೆಯೆಂದು. ಈಗಲೂ ಕಾಲ ಮಿಂಚಿಲ್ಲ. ನನ್ನೊಡನೆ ಬನ್ನಿ, ಆಸ್ಥಾನ ವೈದ್ಯರು ಅತ್ಯುತ್ತಮ ಚಿಕಿತ್ಸೆಯನ್ನು ನೀಡಬಲ್ಲರು, ಯಾವುದಾದರೂ ಉತ್ತಮ ಕುಲದ ಕುವರನನ್ನು ದತ್ತು ಪಡೆದು, ಕೆಳದಿ ಸಂಸ್ಥಾನದ ಹಿರಿಮೆಯನ್ನು ಮುಂದುವರೆಸೋಣ. ಬನ್ನಿ ಪ್ರಭು, ನಿಮ್ಮನ್ನು ಬೇಡಿಕೊಳ್ಳುವೆ, ಅರಮನೆಗೆ ಹಿಂತಿರುಗಿ ಬನ್ನಿ”.

ರಾಣಿ ಚೆನ್ನಮ್ಮ ದೊರೆಯನ್ನು ಅಂಗಲಾಚಿ ಬೇಡಿದಳು. ಭರಮೆಮಾವುತನ ಮೋಡಿ ಮಾತುಗಳಿಂದ, ಮತ್ತಿನ ಔಷಧಗಳಿಂದ ಮತಿಹೀನನಂತಾಗಿದ್ದ ಸೋಮಶೇಖರ ನಾಯಕ ರಾಣಿಯ ಮಾತುಗಳಿಗೆ ಕಿವಿಗೊಡಲೇ ಇಲ್ಲ. ರಾಜ್ಯದ ಜನತೆಯ ಆತಂಕ, ಮೇಲೆರಗಲು ಹದ್ದುಗಳಂತೆ ಕಾಯುತ್ತಿರುವ ಶತೃಗಳ ಸೈನ್ಯದ ಸಂಚು ಎಲ್ಲವನ್ನೂ ವಿವರಿಸಿ. ರಾಜನ ಮನವೊಲಿಸಲು ಪ್ರಯತ್ನಿಸಿ ನಿರಾಶಳಾಗಿ ಹಿಂದಿರುಗಿದಳು.

ಈಗ ಉಳಿದಿರುವುದೊಂದೇ ದಾರಿ, ತಾನೇ ಅಧಿಕಾರವನ್ನು ಕೈಗೆತ್ತಿಕೊಂಡು ರಾಜ್ಯಭಾರ ನಡೆಸಬೇಕು. ಬಳೆ ತೊಡುವ ಕೈ ಖಡ್ಗವನ್ನು ಕೂಡ ಹಿಡಿಯಬಲ್ಲದು, ರಾಜ್ಯವನ್ನಾಳಬಲ್ಲದು ಎಂದು ತೋರಿಸಬೇಕು. ಶತ್ರುಗಳನ್ನು ತಡೆಯಬೇಕು. ಅದಕ್ಕೆ ಸಮರ್ಥರೂ ನಿಷ್ಠರೂ ಆದ ಮಂತ್ರಿಗಳ ಸಹಕಾರ ಅತ್ಯವಶ್ಯಕ, ಎಂದೆಲ್ಲಾ ಯೋಚಿಸುತ್ತಾ ಚೆನ್ನಮ್ಮ ಮುಂದಿನ ಕಾರ್ಯಗಳ ಬಗ್ಗೆ ಚಿಂತಿಸಿದಳು. ಅವಳ ತಂದೆ ಸಿದ್ದಪ್ಪಶೆಟ್ಟಿಯ ಸಾಂತ್ವನ ಹಾಗೂ ಧೈರ್ಯದ ನುಡಿಗಳು ಅವಳಲ್ಲಿ ಚೇತನ ತುಂಬಿದವು.

ಆದರೆ ಗಾಯದ ಮೇಲೆ ಬರೆ ಎಳೆದಂತೆ ಅರಮನೆಯಲ್ಲಿ ಮತ್ತೊಂದು ತೊಡಕು ತಲೆದೋರಿತ್ತು. ಪ್ರಧಾನಿ ತಿಮ್ಮಣ್ಣನಾಯಕ, ಕೃಷ್ಣಪ್ಪ, ನರಸಪ್ಪಯ್ಯ, ಲಕ್ಷ್ಮಯ್ಯ ಮುಂತಾದ ಪ್ರಮುಖ ಸ್ಥಾನಗಳಲ್ಲಿರುವ ಮಂತ್ರಿಗಳು, ಅವರ ಆಯ್ಕೆಯ ಬಾಲಕನನ್ನು ದತ್ತು ಸ್ವೀಕರಿಸಿದರೆ ಮಾತ್ರ ರಾಣಿಗೆ ರಾಜ್ಯದ ಆಡಳಿತದಲ್ಲಿ ಬೆಂಬಲ ನೀಡುವುದಾಗಿಯೂ ಇಲ್ಲವಾದರೆ, ತಮ್ಮಿಂದ ಯಾವ ರೀತಿಯ ಸಹಾಯವೂ ದೊರೆಯದೆಂದು ಘೋಷಿಸಿದರು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ದಿಕ್ಕುಗೆಡದೆ ಆಲೋಚಿಸಿದ ರಾಣಿ ಅವರ ಮಾತುಗಳಿಗೆ ಒಪ್ಪಲಿಲ್ಲ. ನಿಧಾನವಾಗಿ ಯೋಚಿಸಿ, ರಾಜ್ಯವನ್ನು ಶತ್ರುಗಳಿಂದ ರಕ್ಷಿಸಿ ಸಮರ್ಥವಾಗಿ ಮುನ್ನಡೆಸುವ ಸಾಮರ್ಥ್ಯವುಳ್ಳ ಬಾಲಕನು ದೊರೆಯುವವರೆವಿಗೂ ದತ್ತು ತೆಗೆದುಕೊಳ್ಳುವುದಿಲ್ಲವಎಂದು ತೀರ್ಮಾನಿಸಿದಳು. ಆಗ ಅವಳಿಗೆ ದೊರೆತ ಬಾಲಕ ಬಸಪ್ಪನಾಯಕ.

ಇಂತಹ ಗೊಂದಲದ ಪರಿಸ್ಥಿತಿಗಾಗಿ ಕಾಯುತ್ತಿದ್ದ ಬಿಜಾಪುರದ ಸುಲ್ತಾನ ಜನ್ನೋಪಂತನೆಂಬುವನನ್ನು ಸಂಧಿಯ ನೆಪದಲ್ಲಿ ಕೆಳದಿ ಸಂಸ್ಥಾನಕ್ಕೆ ಕಳುಹಿಸಿದ. ಆದರೆ ಗುಟ್ಟಾಗಿ ಭಾರೀ ಸೈನ್ಯವನ್ನೂ ಕೂಡ ಹಿಂದೆಯೇ ಕಳುಹಿಸಿದ್ದ. ಯುದ್ದ ಮಾಡುವ ಪರಿಸ್ಥಿತಿಯಲ್ಲಿಲ್ಲದ ರಾಣಿ ಅಪಾರವಾದ ಹಣವನ್ನಿತ್ತು ಜನ್ನೋಪಂತನೊಡನೆ ಒಪ್ಪಂದ ಮಾಡಿಕೊಂಡಳು. ಆದರೆ ತನ್ನ ಗೂಢಚಾರರ ಮೂಲಕ ಸುಲ್ತಾನನ ಸೈನ್ಯ ಹಿಂದೆಯೇ ಬರುತ್ತಿರುವ ವಿಷಯವನ್ನು ಕೂಡ ತಿಳಿದಿದ್ದಳು. ಅರಮನೆಯಲ್ಲಿದ್ದ ಸಂಪತ್ತನ್ನೆಲ್ಲ ತನ್ನ ಸೈನಿಕರಿಗೆ, ಪ್ರಜೆಗಳಿಗೆ ವಿತರಿಸಿದಳು. ತಮ್ಮ ಧೈರ್ಯ ಸಾಹಸಗಳ ಒರೆಗೆ ಹಚ್ಚುವ ಸಂದರ್ಭ ಈಗ ಬಂದಿದೆ. ಕನ್ನಡ ನಾಡಿನ ಕಲಿಗಳ ಶಕ್ತಿ ಪ್ರದರ್ಶನ ನಡೆಯಬೇಕಿದೆ ಎನ್ನುತ್ತಾ ಜನತೆಯನ್ನು ಹುರಿದುಂಬಿಸಿದಳು.

ಮುಂದಿನ ಪುಟ ನೋಡಿ ...

ರಾಣಿಯ ಬಳಿ ಹಣ ಪಡೆದ ಜನ್ನೋಪಂತ ಭರಮೆಮಾವುತನ ಮನವೊಲಿಸಿ ರಾಜ ಸೋಮಶೇಖರನಾಯಕನನ್ನು ಕೊಲ್ಲಿಸಿದ. ದಿಗ್ಭ್ರಮೆಗೊಂಡ ರಾಣಿ ಶೋಕತಪ್ತಳಾದರೂ, ಪರಿಸ್ಥಿತಿಯ ಸಲುವಾಗಿ ಧೈರ್ಯ ತಾಳಲೇ ಬೇಕಾಯಿತು. ಇನ್ನೂ ಚಿಕ್ಕವಯಸ್ಸಿನಲ್ಲೇ ದುಷ್ಕರ್ಮಿಗಳ ತಂತ್ರದಿಂದ ಅಸ್ವಾಭಾವಿಕ ಮರಣಕ್ಕೀಡಾದ ಪತಿಯ ಅವನತಿಗೆ ಕಾರಣರಾದವರಿಗೆ ಸರಿಯಾದ ಶಿಕ್ಷೆಯಾಗಬೇಕೆಂದು ಪಣತೊಟ್ಟಳು ಚೆನ್ನಮ್ಮ.
ತನ್ನ ದುಷ್ಟಬುದ್ಧಿಯನ್ನು ಇನ್ನೂ ತೋರುತ್ತಾ ಹೋದ ಭರಮೆಮಾವುತ, ಹಣ ಪಡೆದು ಸುಲ್ತಾನನ ಸೇನೆಗೆ, ಬಿದನೂರಿನ ಕೋಟೆಯನ್ನು ವಶಪಡಿಸಿಕೊಳ್ಳಲು ಸಹಾಯ ನೀಡಿದ. ಅಪಾರ ಸಂಖ್ಯೆಯಲ್ಲಿದ್ದ ಸುಲ್ತಾನನ ಸೇನೆಯನ್ನು ಎದುರು ಹಾಕಿಕೊಳ್ಳುವುದು ಅಪಾಯಕಾರಿಯೆಂದು ಸಿದ್ದಪ್ಪಶೆಟ್ಟಿ ಮತ್ತು ಉಳಿದ ಹಿತೈಷಿಗಳ, ಹಿರಿಯರ ಸಲಹೆಯಂತೆ ಚೆನ್ನಮ್ಮ ಬಿದನೂರಿನ ಅರಮನೆಯ ಸಕಲ ಸಂಪತ್ತು ಮತ್ತು ಖಜಾನೆಯ ಅಪಾರ ದ್ರವ್ಯರಾಶಿಯೊಂದಿಗೆ, ಭುವನಗಿರಿಯನ್ನು ಸೇರಿಕೊಂಡಳು. ಮೋಸದಿಂದ ಅರಮನೆಗೆ ನುಗ್ಗಿದ ಸುಲ್ತಾನನ ಸೇನೆಗೆ ನಿರಾಶೆ ಕಾದಿತ್ತು. ಅಪಾರ ಸಂಪತ್ತನ್ನು ಕೊಳ್ಳೆ ಹೊಡೆಯುವ ನಿರೀಕ್ಷೆಯಿಂದಿದ್ದವರು ಬರಿದಾದ ಖಜಾನೆ ಕಂಡು ಸಿಟ್ಟಿಗೆದ್ದರು.ಆದರೆ ರಾಣಿಯ ಪರಿವಾರವನ್ನು ಹಿಂಬಾಲಿಸಿ ಭುವನಗಿರಿಗೆ ಹೋಗುವುದು ಅಷ್ಟು ಸುಲಭವಾಗಿರಲಿಲ್ಲ. ಭುವನಗಿರಿ, ದಟ್ಟ ಕಾನನದ ನಡುವೆ ಅಭೇದ್ಯವಾಗಿತ್ತು.

****

ಮೂಡಿದ ಹೊಂಬೆಳಕು

ಭುವನಗಿರಿಯನ್ನು ತಲುಪಿದ ಮೇಲೆ ಒಂದು ದಿನ ಪ್ರಧಾನಮಂತ್ರಿ ತಿಮ್ಮಣ್ಣನಾಯಕರು ಅರಮನೆಗೆ ಆಗಮಿಸಿದಾಗ ರಾಣಿಗೆ ಆಶ್ಚರ್ಯವಾಯಿತು.
"ಮಹಾರಾಣಿಯವರು ನನ್ನನ್ನು ಮನ್ನಿಸಬೇಕು, ನನ್ನಿಂದ ಮಹಾಪರಾಧವಾಯಿತು".
"ತಿಮ್ಮಣ್ಣನಾಯಕರೇ ನೀವು ನನ್ನ ತಂದೆಯವರಿಗೂ ಹಿರಿಯರು, ನೀವು ನನ್ನಲ್ಲಿ ಕ್ಷಮೆಯಾಚಿಸುವುದೇ, ಅಂತಹದೇನಾಯಿತು?"
"ಇಲ್ಲ ತಾಯಿ ನಾನು ಮನ್ನಿಸಲಾರದಂತ ಅಪರಾಧವೆಸಗಿದ್ದೇನೆ. ಬಿದನೂರಿನಲ್ಲಿಯೇ ಹುಟ್ಟಿಬೆಳೆದು ಅಲ್ಲಿಯ ಅನ್ನತಿಂದವನು ನಾನು. ದತ್ತು ತೆಗೆದುಕೊಳ್ಳುವ ವಿಷಯದಲ್ಲಿ ನಾನು ನಿಮ್ಮ ಬಳಿ ದುಡುಕಿದೆ. ರಾಜ್ಯದ ಹಿತದೃಷ್ಟಿಯಿಂದ ಚಿಂತಿಸದೆ ಸಣ್ಣತನ ತೋರಿಸಿದೆ. ಬಿದನೂರು ಶತೃಗಳ ಪಾಲಾದುದರಲ್ಲಿ ನನ್ನ ತಪ್ಪೂ ಇದೆ. ಆ ತಪ್ಪನ್ನು ಅರಿತುಕೊಂಡು ನಿಮ್ಮ ಸೇವೆಗೆ ಹಿಂದಿರುಗಿ ಬಂದಿದ್ದೇನೆ, ಈಗ ಎಲ್ಲರೂ ಒಂದಾಗಿ ಹೋರಾಡೋಣ, ಅವಕಾಶ ನೀಡುವಿರಲ್ಲವೇ", ಎಂದು ಗದ್ಗದಿತರಾಗಿ ನುಡಿದರು.
"ಪ್ರಧಾನಿಗಳೇ, ನೀವೆಂದೆಂದಿಗೂ ರಾಜ್ಯದ ಹಿತೈಷಿಗಳೇ, ಹಿರಿಯರಾದ ಶಿವಪ್ಪನಾಯಕರ ಸಮಕಾಲೀನರು ತಾವು, ತಮ್ಮಂತಹವರು ಈ ರಾಜ್ಯಕ್ಕೆ ಕೇಡು ಬಯಸಲು ಸಾಧ್ಯವೇ ಇಲ್ಲ. ಏನೋ ನಮ್ಮ ದುರ್ದೈವದಿಂದ ಕೆಲವು ತಪ್ಪುಗಳು ನಡೆದು ಹೋದವು. ನೀವು ಹಿಂದಿರುಗಿ ಬಂದಿರುವುದು ನಮ್ಮ ಭಾಗ್ಯ. ಮತ್ತೆ ಎಲ್ಲರೂ ಒಂದಾಗಿ ನಮ್ಮ ರಾಜಧಾನಿಯನ್ನು ವಶಪಡಿಸಿಕೊಳ್ಳೋಣ. ನಿಮ್ಮ ಮಾರ್ಗದರ್ಶನವಿಲ್ಲದೇ ಅದು ಸಾಧ್ಯವಿಲ್ಲ", ಎಂದೆನ್ನುತ್ತಾ ರಾಣಿ ಆದರದಿಂದ ಅವರನ್ನು ಸ್ವಾಗತಿಸಿದಳು.
ಸೋಮಶೇಖರ ನಾಯಕನ ಮರಣ, ಶತೃಗಳ ಆಕ್ರಮಣ, ಹೀಗೆ ಅನೇಕ ಗೊಂದಲಗಳಲಲ್ಲಿ ಬಳಲಿದ್ದ ರಾಜ್ಯದ ಜನತೆ ಮತ್ತೆ ರಾಣಿಯಲ್ಲಿ ಹೊಸ ನಾಯಕತ್ವವನ್ನು ಕಂಡು ಸಂತಸ ಹೊಂದಿದರು. ರಾಣಿಗೆ ಬೆಂಬಲ ತೋರುತ್ತಾ, ದೂರವಾಗಿದ್ದ ಅನೇಕ ಅಧಿಕಾರಿಗಳು, ಸೈನ್ಯಾಧಿಕಾರಿಗಳು ಭುವನಗಿರಿಗೆ ಬಂದರು. ಹೊಸ ಹುರುಪಿನಿಂದ ರಾಣಿ ಮತ್ತೆ ಬಿದನೂರಿನತ್ತ ತನ್ನ ಸೈನ್ಯದೊಂದಿಗೆ ಹೊರಟಳು. ಅತ್ತಲಿಂದ ಭುವನಗಿರಿಯೆಡೆಗೆ ಬರುತ್ತಿದ್ದ ಶತೃ ಸೈನ್ಯ, ಆ ಕಾನನದಲ್ಲಿ ಕನ್ನಡದ ಕಲಿಗಳೊಡನೆ ಕಾದಾಡಲಾರದೆ ಸೋತು ಹಿಮ್ಮೆಟ್ಟಿದರು.
೧೬೭೧ ರಲ್ಲಿ ಚೆನ್ನಮ್ಮನು ಭುವನಗಿರಿಯಲ್ಲಿ ಕೆಳದಿ ಸಂಸ್ಥಾನದ ಮಹಾರಾಣಿಯಾಗಿ ಸಿಂಹಾಸನಾರೋಹಣ ಮಾಡಿದಳು.

ಮುಂದಿನ ಕಂತಿನಲ್ಲಿ ಮುಂದುವರಿಯುವುದು ...

ಕೆಳದಿಯ ಕೋಟೆ

ಕನ್ನಡದ ಒಂದು ಕಾಯಕಕ್ಕೆ ಕೈ ಜೋಡಿಸಿ

ನೊಂದಾಯಿಸಲು ಮಿಂಚಂಚೆ ವಿಳಾಸ -sugamakannada@gmail.com

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಚನ, ಕಗ್ಗ, ಗಮಕ, ಹರಿದಾಸ ಸಾಹಿತ್ಯಗಳು ಕೆಲವು ಪ್ರಮುಖ ಪ್ರಾಕಾರಗಳು. ಇವುಗಳಲ್ಲಿ ಭಗವಂತನ ನಾಮಸ್ಮರಣೆಯಷ್ಟೇ ಅಲ್ಲದೆ, ವಚನಗಳು ತಮ್ಮ ಸರಳ ನುಡಿಯಲ್ಲಿ ಅನುಭವದ ಅರಿವು ನೀಡುವಲ್ಲಿ ನೆರವಾದರೆ, ಹರಿದಾಸ ಸಾಹಿತ್ಯವು ಸಂಗೀತ ಮತ್ತು ಸೊಬಗಿನ ಸಾಹಿತ್ಯದ ಮಿಲನವಾಗಿದೆ. ಕಗ್ಗ, ತ್ರಿಪದಿ,ಷಟ್ಪದಿಗಳು ಅರ್ಥಪೂರ್ಣ ವಿಚಾರಗಳಿಂದ ಕೂಡಿ ಜೀವನದರ್ಶನ ಹಾಗೂ ವಿಚಾರಪೂರ್ಣ ವಿಷಯಗಳಾಗಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತಿನ ಎಂದಿಗೂ ಝಗಝಗಿಸುವ ಕೊಡುಗೆಗಳಾಗಿವೆ.

ಅಂತರ್ಜಾಲದ ಈ ಮಹಾ ಜಗತ್ತಿನಲ್ಲಿ ಈಗ ಸಾಕಷ್ಟು ಕನ್ನಡಿಗರು ಕರ್ನಾಟಕದಿಂದ ಹೊರಗಿರುವುದು ಎಲ್ಲರಿಗೂ ತಿಳಿದ ವಿಚಾರ. ಅವರೆಲ್ಲರಿಗೂ ಅಲ್ಲದಿದ್ದರೂ ಆಸಕ್ತರಿಗೆ ನೆನೆದಾಗ ಬೆರಳಂಚಿನಲ್ಲೇ ಒಂದೇ ಕಡೆ ಕೈಗೆಟಕುವ ಹಾಗೆ ಮಾಡುವ ನಿಟ್ಟಿನಲ್ಲಿ ನಮ್ಮ ಸುಗಮ ಕನ್ನಡ.ಕಾಂ ಅಂತರ್ಜಾಲ ಕ್ಷೇತ್ರದಲ್ಲಿ ಸುಪ್ರಸಿದ್ಧ ಶರಣರ ವಚನಗಳು, ದಾಸರ ಪದಗಳು, ಕಗ್ಗ, ತ್ರಿಪದಿಗಳು ಹೀಗೆ ಇನ್ನೂ ಅನೇಕ ರಚನೆಗಳನ್ನು ಸಂಗ್ರಹ ಮಾಡುವ ಯೋಜನೆಯನ್ನು ಹಮ್ಮಿಕೊಂಡಿದೆ. ಇದಕ್ಕೆ ತಮ್ಮಗಳ ಸಹಾಯ ಬೇಕಾಗಿದೆ. ತಮಗೆ ಕನ್ನಡ ಬೆರಳಚ್ಚು ಮಾಡಲು ಸಾಧ್ಯವಿದ್ದಲ್ಲಿ, ಈ ಕಲಸ ಆದಂತೇ ಎಂದುಕೊಳ್ಳಿ. ಪ್ರತಿ ವಿಭಾಗದಲ್ಲೂ ಸಾವಿರಕ್ಕೂ ಮೀರುವಂತೆ ಕೃತಿಗಳ ಕಲೆ ಹಾಕುವ ಯೋಚನೆ ಇದೆ. ಈ ಕೆಲಸಕ್ಕೆ ಗರಿಷ್ಟ ಮಿತಿಯಿಲ್ಲದಂತೆ ಹೆಗಲುಕೊಟ್ಟು ನೀವು ಸಹಾಯ ನೀಡಬಹುದು.ನಿಮ್ಮಲ್ಲಿ ಹೆಚ್ಚಿನ ಕನ್ನಡ ಅಭಿಮಾನವಿದ್ದಷ್ಟೂ ಹೆಚ್ಚಿನ ಸಹಾಯ ಸಾಧ್ಯವೆಂಬ ನಂಬಿಕೆ ನಮ್ಮದು. ೩೧ ಆಗಸ್ಟ್ ೨೦೧೫ ರೊಳಗೆ ಈ ಕಾಯಕ ಮುಗಿಸಿ, ಆಸಕ್ತರಿಗೆ ಲಭ್ಯವಾಗಿಸುವ ಆಸೆ ನಮ್ಮದು.

ಸಿಡ್ನಿ ಕನ್ನಡ ಶಾಲೆಯಿಂದ ಈಗಾಗಲೇ ಉತ್ತೀರ್ಣರಾದ ಮಕ್ಕಳೂ, ಸಿಡ್ನಿ ಕನ್ನಡ ಶಾಲೆಯ ಶಿಕ್ಷಕರೂ, ಆಸ್ಟ್ರೇಲಿಯಾದಲ್ಲಿ ಈಗಾಗಲೇ ಕನ್ನಡ ಟೈಪಿಂಗ್ ಮಾಡಲು ಕಲಿತವರೂ,ಪ್ರಪಂಚದ ನಾನಾ ಕಡೆಯಿಂದ ಹೊರನಾಡ ಚೆಲುಮೆಯ ಓದುಗರೂ, ಬರಹಗಾರರೂ ಸಹ ತಮ್ಮ ಕೈ ಜೋಡಿಸಿದ್ದಾರೆ.

ಸಹಾಯ ಹೇಗೆ?

೧.ಮೊದಲು ಆಸಕ್ತರು ಈ-ಮೈಲ್ ಮೂಲಕ ತಮ್ಮ ಹೆಸರು ನೊಂದಾಯಿಸಿಕೊಳ್ಳುವುದು.

೨.ಸುಪ್ರಸಿದ್ಧ ರಚನಕಾರರ ವಚನ, ದಾಸರ ಪದಗಳು, ಕಗ್ಗ, ತ್ರಿಪದಿಗಳು ಇವುಗಳಲ್ಲಿ ಸುಮಾರು ನಾಲ್ಕೈದು ಪುಟಗಳಷ್ಟು ತಮಗೆ ಈ-ಮೈಲ್ ಮೂಲಕ ಕಳುಹಿಸಿಕೊದಲಾಗುವುದು.

೩.ಅದನ್ನು ತಾವು ಬರಹ-ಯೂನಿಕೋಡ್ ಅಥವಾ ಗೂಗಲ್ ಸಹಾಯದಿಂದ ಟೈಪ್ ಮಾಡಿ ನಮಗೆ ಕಳುಹಿಸುವುದು.

೪.ಅವುಗಳನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಿದ ನಂತರ ಸಹಾಯ ಮಾಡಿದ ಎಲ್ಲರ ಹೆಸರನ್ನೂ ಶಾಶ್ವತವಾಗಿ ಮುದ್ರಿಸಲಾಗುವುದು. ಅತಿ ಹೆಚ್ಚು ನೆರವು ನೀಡಿದವರಿಗೆ ಕನ್ನಡ ಶಾಲೆಯ ಕಡೆಯಿಂದ ಉಡುಗೊರೆ ಖಚಿತ.

ನೊಂದಾಯಿಸಲು ಮಿಂಚಂಚೆ ವಿಳಾಸ - sugamakannada@gmail.com

ಫಿಟ್ನೆಸ್ ಮಂತ್ರದ ಸುಂದರ ಬೆಡಗಿ !!!

ಸ್ಮಿತಾ ಮೇಲ್ಕೋಟೆ

ಬೆಂಗಳೂರಿನ ಅತ್ತೆ, ತನ್ನ ಮುದ್ದಿನ ಫಾರಿನ್ ಸೊಸೆ (ಪಾಪ ಮೈಸೂರಿನ ಹುಡುಗಿನೇ ಆದರೆ ಫಾರಿನ್ converted) ಮತ್ತು ಮಗನ ನೋಡಲು, ಚಕ್ಲಿ, ಮುಚ್ಚೊರೆ, ಲಾಡು ಬರ್ಫಿ ಎಲ್ಲಾ ಸ್ವತಃ ತನ್ನ ಕೈಯಾರೆ ಮಾಡಿ, ಡಬಲ್ ಪ್ಯಾಕ್ ಮಾಡಿಕೊಂಡು, ಪಾಕೆಟ್ ಮೇಲೆ ಅದರ ಕುಲ-ಗೋತ್ರದ ವಿವರಗಳನ್ನು ಅಚ್ಚು ಹಾಕಿಕೊಂಡು, ದೇವರದಯದಿಂದ ಹೇಗೋ ಕಸ್ಟಮ್ಸ್ ನವರಿಂದ ಬಚಾವ್ ಮಾಡಿಕೊಂಡು ಆಸ್ಟ್ರೇಲಿಯಾಗೆ ಬಂದು ಇಳಿದಳು.

ಮಾರನೇ ದಿನ ಅತ್ತೆ ಬೇಗನೆದ್ದು ನೋಡ್ತಾಳೆ, ಸೊಸೆ ೫ ಗಂಟೆಗೆ ಎದ್ದು ಎಲ್ಲೋ ಹೋಗಿಬಿಟ್ಟಿದ್ದಾಳೆ. ಮಗನ ಕೇಳಿದ್ರೆ, ಎಲ್ಲೋ ಓಡಿ ಹೋಗಿರಬೇಕು ಅಂತಾನೆ. ಏನಪ್ಪಾ ನಾನು ಬಂದ ದಿನಾನೆ ಅವಳು ಓಡಿ ಹೋಗೋ ಮಹೂರ್ತನಾ ಅಂತ ಹೌ ಹಾರಿದರೆ, ಮಗ ಕೂಲ್ ಆಗಿ ಅಮ್ಮ ನೀ ಕಾಫಿ ಮಾಡಿಕೊಂಡು ಕುಡಿ ಅಂದ. ಅತ್ತೆ ಬಿಸಿ ಕಾಫಿ ಕುಡಿದು, ಸೊಸೆ ಬಗ್ಗೆ ಯೋಚಿಸುತ್ತಾ ತಲೆ ಬಿಸಿ ಮಾಡಿಕೊಳ್ಳುತ್ತಾ ಕೂತಾಗಲೇ ಬಾಗಿಲು ಬಳಿ ಸದ್ದಾಯಿತು.

ಪೂರ್ತಿ ಬೆವರಿ, ಕೆಂಪನೆ ಮಾರಿ ಮಾಡಿಕೊಂಡು ಒಳ ಬಂದ ಸೊಸೆ, ಅತ್ತೆ ನಿದ್ದೆ ಬಂತಾ ಚೆನ್ನಾಗಿ ಅಂತ ಕೂಲ್ ಆಗಿ ವಿಚಾರಿಸೋದೆ. ಓಡಿ ಹೋಗಿ ತಿರುಗಿ ಬಂದ ಸೊಸೆಗೆ ಅಂತ ಬಿಸಿ ಬಿಸಿ ಕಾಪಿ ಹಿಡಿದು ನಿಂತರೆ, ಅತ್ತೆ ನಾನು Nutriblast ಕುಡಿಯೋದು ಅಂತ ಉಲಿದಳು. ಇದೇನು ಕಾಫಿ ಬಿಟ್ಟು ಅದೆಂತದೋ ಬ್ಲಾಸ್ಟ್ ಮಾಡೋದೇ ವಿಚಿತ್ರನಪ್ಪಾ ಕುಡಿದ ಮೇಲೆ... ಯಾರಿಗೆ ಎಲ್ಲಿ ಬ್ಲಾಸ್ಟ್ ಆಗುತ್ತೋ ಏನೋ ದೇವರೇ ಬಲ್ಲ !

ಮಗರಾಯ ಬೆಳಿಗ್ಗೆ ಆಫೀಸ್ಗೆ ಹೊರಡೋ ಮೊದಲು ಅಮ್ಮಂಗೆ ಹೇಳಿದ... ಫ್ರಿಡ್ಜ್ ಒಳಗೆ ಅಂಗಡಿಯಿಂದ ತಂದ ದೋಸೆ ಹಿಟ್ಟು ಇದೆ, ನೀನು ತಿಂಡಿ ಮಾಡಿಬಿಡು ಅಮ್ಮ, ನಂಗೆ ಲೇಟ್ ಆಗ್ತಾ ಇದೆ ಬರ್ತೀನಿ ಅಂತ ಹೊರಟೇ ಬಿಟ್ಟ. ಸೊಸೆ ಬರಲಿ, ಇಬ್ಬರೂ ಒಟ್ಟಿಗೆ ತಿಂದರಾಯಿತು ಅಂತ ಅತ್ತೆ ವೈಟಿಂಗೋ ವೈಟಿಂಗ್ !!!

ಅತ್ತೆ ತಿಂಡಿ ತಿಂದ್ರಾ ಅಥವಾ ನಾನು ತಿನ್ನೋ ಓಟ್ಸ್ ರುಚಿ ನೋಡ್ತೀರೋ ಅಂದಳು, ತೋರಿಸೇ ಮಾರಾಯ್ತಿ ನೋಡೋಣ ನಿನ್ನ ಸವಿ ತಿಂಡಿ, ಎಂಥದೋ ನಮ್ಮೂರ ಹಸು ಎಮ್ಮೆಗೆ ಹಾಕೋ ತೌಡು ತರ ಇದೆ, ಅದನ್ನ ಮಜ್ಜಿಗೆಗಿಂತ ತೆಳ್ಳನೆ ಹಾಲಿನಲ್ಲಿ ಬೇಯಿಸಿ, ಮೇಲೊಂದಿಷ್ಟು ಹಣ್ಣು ಉದುರಿಸಿ ಬಿಸಿ ಬಿಸಿಯಾಗೇ ಸೇವಿಸಬೇಕಂತೆ... ಅಯ್ಯೋ ಏನಪ್ಪಾ ಕರ್ಮ ಪ್ರಾಣಿಗಳ ಆಹಾರ ಮತ್ತು ಮನುಷ್ಯರ ಆಹಾರಕ್ಕೆ ವ್ಯತ್ಯಾಸವೇ ಗೊತ್ತಾಗ್ತಾ ಇಲ್ಲ ಅಂತ ಅತ್ತೆ ಒಳಗೊಳಗೇ ಬಡ ಬಡಾಯಿಸಿದಳು. ಅತ್ತೆ ಬೆಳಿಗ್ಗೆ ಬೆಳಿಗ್ಗೆ ಎಣ್ಣೆ ಪದಾರ್ಥ ಒಳ್ಳೇದಲ್ಲ ಎಂಬ ಪಾಠ ಬೇರೆ ನಡೆಯಿತು ಸೊಸೆಯಿಂದ.

Old fashioned ಅತ್ತೆ ಪಾಪ ಸೊಸೆಗೋಸ್ಕರ ಹೊಸ ನಮೂನೆ ಬಳೆ ಸರ ಮಾಡಿಸಿ ತಂದರೆ, ಅಲ್ಲಿಯೂ ಕೂಡ ಅತ್ತೆಗೆ ಪೆಚ್ಚು ಮುಖವಾಯಿತು. ಸೊಸೆ ಎಂತದೋ ಫಿಟ್ ಬಿಟ್ ಅಂತೆ ರಬ್ಬರ್ ಬಳೆ ತೊಟ್ಟುಕೊಂಡು, ಬಳೆ ಅಂದ್ರೆ ಬಳೆ ಅಲ್ಲ. ತಿಂದ ಆಹಾರ ಅದರ ಕ್ಯಾಲೋರಿ ಎಣಿಕೆ, ಹಾರ್ಟ್ ಬೀಟ್, ಎಷ್ಟು ಕೊಬ್ಬು ಕರಗಿಸಿದ್ದೇವೆ ಎಲ್ಲಾ ಕಂಪ್ಯೂಟರ್ ನಲ್ಲಿ ತೋರಿಸುತ್ತೆ. ಅತ್ತೆ ಬಂದ ದಿನದಿಂದ ಸೊಸೆ ಫಿಟ್ನೆಸ್ ಮಂತ್ರ ಹಾಡೋದು ನೋಡಿ ನೋಡಿ ಸುಸ್ತಾದಳು. ಇತ್ತ ಕಡೆ ಅತ್ತೆ ಹನುಮಾನ್ ಚಾಲಿಸ ಮಂತ್ರ, ಅತ್ತ ಕಡೆ ಸೊಸೆ Zumba ನೃತ್ಯ... ಒಂದಕ್ಕೊಂದು ಹೊಂದಿಕೊಂಡು ಹೋಗ್ತಾ ಇದ್ದವು.

ಬೆಳಗಾಗೆದ್ದರೆ ಸಾಕು ಸೊಸೆಯ ಯೋಗಾಸನಗಳು ಅತ್ತೆಯನ್ನೂ ತಕ್ಕ ಮಟ್ಟಿಗೆ ಸೆಳೆಯಲು ತೊಡಗಿತು. ಸೊಸೆ ಪಾಠ ಬೇರೆ ಇರುತಿತ್ತಲ್ಲ, ಅದೂ ಅತ್ತೆ ತಲೆಯೊಳಗೆ ನಿಧಾನವಾಗಿ ಇಳಿಯತೊಡಗಿತು. ನಿಧಾನವಾಗಿ, ಅತ್ತೆ ಪ್ರಾಣಾಯಾಮ, ಯೋಗಾಸನಗಳು, ಜಾಗಿಂಗ್ ಮತ್ತು ಆರೋಗ್ಯಕರ ಊಟ ತಿಂಡಿ ಅಭ್ಯಾಸ ಮಾಡಿಕೊಂಡಳು. ತನ್ನ ಮುತ್ತಿನ, ಚಿನ್ನದ ಬಳೆಗಳನ್ನು ಬಿಚ್ಚಿಟ್ಟು ಫಿಟ್ ಬಿಟ್ ಬಳೆಗಳ ಸಹವಾಸವಾಯಿತು. ಗೊತ್ತಿದ್ದ ಅಲ್ಪ ಸ್ವಲ್ಪ ಕಂಪ್ಯೂಟರ್ ನಲ್ಲಿಯೇ ತನ್ನ ನಿತ್ಯದ ಫಿಟ್ ಬಿಟ್ reading ನೋಡ ತೊಡಗಿದಳು. ದಿನ ದಿನಕ್ಕೆ ಅತ್ತೆಯ ದೇಹ ಕರಗ ತೊಡಗಿತು. ಸ್ವಲ್ಪ ಬಾಯಿಕಟ್ಟಿ, ಡಯಟ್ ಮಾಡೋದು ಅಷ್ಟೊಂದು ಸುಲಭದ ಕೆಲಸವೇ... ಆದರೂ ಸೊಸೆಗೆ ಒಳ್ಳೆ ಕಾಂಪಿಟಿಷನ್ ಕೊಡಬೇಕು ಎಂದು, ತನ್ನ ಎಲ್ಲಾ ಶ್ರಮ ಹಾಕ ತೊಡಗಿದಳು. ಸೊಸೆಗೆ ಇದರಿಂದ ಒಂದು ಹೊಸ ಉತ್ಸಾಹ, ತನ್ನ ಅತ್ತೆ ಚೇಂಜ್ ಆಗ್ತಾ ಇದ್ದಾರಲ್ಲ ಅಂತ. ಹಾಗು ಹೀಗೂ ಅತ್ತೆ ವೀಸಾ ಮುಗಿದು ಮತ್ತೆ ಊರಿಗೆ ಹೊರಡೋ ದಿನ ಬಂದೇ ಬಿಟ್ಟಿತು. ಮಗನಿಗೆ ಆಶ್ಚರ್ಯ ಇದೇನು ಬೆಂಗಳೂರಿನ ನನ್ನ ಅಮ್ಮ ಇದೇನಾ... ೨೦ ವರ್ಷ ಕಡಿಮೆ ಆದ ನನ್ನ ಅಕ್ಕನ ಹಾಗಿದ್ದಾರಲ್ಲ ಅಂತ... ಬಹಳ ಸಂತೋಷದಿಂದ ಹೊರಡುವ ಮುನ್ನ ಮಗ ಶಾಪಿಂಗ್ ಕರೆದುಕೊಂಡು ಹೋಗಿ, ಅಮ್ಮ ಏನು ಬೇಕಮ್ಮ ನಿಂಗೆ ಇಲ್ಲಿಂದ ಅಂತ ಕೇಳಿದರೆ... ಏನೂ ಬೇಡಪ್ಪ ನನಗೆ "ಒಂದೇ ಒಂದು ರಬ್ಬರ್ ಫಿಟ್ ಬಿಟ್ ಕೊಡಿಸಿಬಿಡು ಸಾಕು ಅನ್ನೋದೇ"

ಅತ್ತೆ ಫಿಟ್ನೆಸ್ ಬೆಡಗಿ ಆದ ಕಥೆ ಹೇಗಿತ್ತು ? ▪

ವಿಜ್ಞಾನ

ನೀರು ಮತ್ತು ಮಂಜುಗಡ್ಡೆ

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:

- ಒಂದು ಗಾಜಿನ ಲೋಟದ ತುಂಬ ನೀರು
- ಒಂದು ಸಣ್ಣ ಮಂಜುಗಡ್ಡೆ (icecube)
- ಒಂದು ಟ್ರೇ

ವಿಧಾನ:

- ತುಂಬಿರುವ ಲೋಟದ ನೀರನ್ನು ಟ್ರೇ ಮೇಲಿಡಿ. (ನೀರು ಚೆಲ್ಲಬಹುದು ಎಂಬ ಕಾರಣಕ್ಕೆ)
- ನಿಧಾನವಾಗಿ ಮಂಜುಗಡ್ಡೆಯನ್ನು ನೀರಿನಲ್ಲಿ ಇಳಿಸಿ. (ನೀರು ಚೆಲ್ಲದಂತೆ ನೋಡಿಕೊಳ್ಳಿ. ನಿಧಾನಕ್ಕೆ ಇಳಿಸಿದರೆ ಸಾಮಾನ್ಯವಾಗಿ ಚೆಲ್ಲುವುದಿಲ್ಲ.)
- ಮಂಜುಗಡ್ಡೆ ಕರಗಿದಂತೆ ನೀರಿನ ಮಟ್ಟ ಏನಾಗುತ್ತಿದೆ ಎಂದು ವೀಕ್ಷಿಸಿರಿ.
- ಮಂಜುಗಡ್ಡೆಯ ಗಾತ್ರದ ಸಮಕ್ಕೆ ನೀರು ಚೆಲ್ಲುವುದೇ ಎಂದು ಅಂದಾಜು ಮಾಡಿ

ಏನಾಗುತ್ತಿದೆ:

ಮಂಜುಗಡ್ಡೆ ಕರಗಿದರೂ, ಸಾಮಾನ್ಯವಾಗಿ ನೀರು ಲೋಟದಿಂದ ಹೊರ ಚೆಲ್ಲುವುದಿಲ್ಲ. ನೀರು ಮಂಜುಗಡ್ಡೆಯಾಗಲು ಹೆಪ್ಪುಗಟ್ಟುವಾಗ ವಿಸ್ತಾರಗೊಳ್ಳುತ್ತದೆ (expands). ಹೀಗಾಗಿ, ನೀರಿಗಿಂತ ಹೆಚ್ಚು ಜಾಗವನ್ನು ತೆಗೆದುಕೊಳ್ಳುತ್ತದೆ. ಅದೇ ಮಂಜುಗಡ್ಡೆಯು ಕರಗಿ ನೀರಾದಾಗ, ಮಂಜುಗಡ್ಡೆಗಿಂತ ಕಡಿಮೆ ಜಾಗವನ್ನು ತೆಗೆದುಕೊಳ್ಳುತ್ತದೆ. ಹೀಗಾಗಿ ನೀರು ಲೋಟದಲ್ಲಿ ತುಂಬಿದ್ದರೂ, ಕರಗಿದ ಆ ಸಣ್ಣ ಮಂಜುಗಡ್ಡೆಯು ಲೋಟದ ನೀರಿಗೆ ಹೆಚ್ಚು ನೀರು ಸೇರಿಸುವುದಿಲ್ಲ. ಹೀಗಾಗಿ ಸಾಮಾನ್ಯವಾಗಿ ನೀರು ಚೆಲ್ಲುವುದಿಲ್ಲ.
ಅದೇ ಲೋಟಕ್ಕೆ ದೊಡ್ಡ ಗಾತ್ರದ ಮಂಜುಗಡ್ಡೆಯನ್ನು ಹಾಕಿದರೆ, ಖಂಡಿತ ನೀರು ಚೆಲ್ಲುತ್ತದೆ.
ಈ ಪ್ರಯೋಗದ ಉದ್ದೇಶ, ದ್ರವ ರೂಪದ ನೀರಿಗಿಂತ ಘನೀಕೃತ ನೀರು ಹೆಚ್ಚು ಜಾಗ ತೆಗೆದುಕೊಳ್ಳುತ್ತದೆ ಎಂಬುದಾಗಿದೆ.
ಶೀತವಲಯದಲ್ಲಿ ನೀರಿನ ಕೊಳವೆಗಳು ಹೆಚ್ಚು ಒಡೆಯುತ್ತವೆ (Burst Pipes) ಎಂದು ನೀವು ಕೇಳಿರಬಹುದು. ಅದಕ್ಕೆ ಕಾರಣವು ಈ ಪ್ರಯೋಗದಿಂದ ನೀವು ತಿಳಿಯಬಹುದು. ಚಳಿಗಾಲದಲ್ಲಿ ಕೊಳವೆಯಲ್ಲಿನ ನೀರು ಹೆಪ್ಪುಗಟ್ಟಿದಂತೆ, ಜಾಗ ಸಾಲದಾಗಿ ಬಿರುಕುಬಿಟ್ಟು ಒಡೆಯುತ್ತವೆ. ▪

ಜಾಣ ಕರ್ನಾಟಕ – ಉತ್ತರ

೧. ದಾರೋಜಿ ಬಳ್ಳಾರಿ ಜಿಲ್ಲೆಯಲ್ಲಿದೆ. ಇದು ಕರಡಿ ಸಂರಕ್ಷಣೆಗಾಗಿ ಮೀಸಲಾದ ಅಭಯಾರಣ್ಯ.
೨. ಅಣಶಿ ಉತ್ತರ ಕನ್ನಡ ಜಿಲ್ಲೆಯಲ್ಲಿದೆ. ಇದು ಹುಲಿ ಸಂರಕ್ಷಣೆಗಾಗಿ ಮೀಸಲಾದ ಉದ್ಯಾನವನ.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಸುಗಮ ಕನ್ನಡ ಕೂಟದ

ವೈಭವದ ದಶಮಾನೋತ್ಸವ

ಅಕ್ಟೋಬರ್ ೨೦೧೫ ರಲ್ಲಿ

ವಿವರಗಳನ್ನು ನಿರೀಕ್ಷಿಸಿ

UNTED INDIA ASSOCIATIONS INC

FRIENDSHIP FAIR 2015

BLACKTOWN SHOWGROUND

RICHMOND ROAD, BLACKTOWN – 2148

SUNDAY 23rd AUGUST 2015

9 AM – 5:30 PM

www.uia.org.au

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ
ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ
ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ
ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.